ಸಂಪುಟ : 8 ಸಂಚಿಕೆ : 164 ಪುಟ : 4 ಬೆಲೆ : 3.00 ಬುಧವಾರ ಅಗಸ್ಟ್ 02, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ





Volume : 8 Issue : 164 Pages : 4 Price : 3.00 Wednesday August 02, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ನೀರು ಪೂರೈಕೆಯಾಗುವ ಸ್ಥಳಗಳ ಮಾಹಿತಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಬುಧವಾರ ನೀರು ಪೂರೈಕೆಯಾಗುವ ಸ್ಥಳಗಳ ಮಾಹಿತಿ ಹೀಗಿದೆ.

ವಾರ್ಡ್ ನಂ.20, 22, 23, 25ರ ಖಾನತೋಟ ಭಾಗಗಳು, ಗೌಳಿಯವರ ಲೈನ್, ಕೊಟ್ಟೂರವರ ಲೈನ್, ಹುಲಿಗೆಮ್ಮ ದೇವಿ ಗುಡಿಯ ಲೈನ್, ಶೇಖಪ್ಪಜ್ಜನ ಗುಡಿ ಲೈನ್, ಎಸ್‌ಟಿಡಿ ಲೈನ್, ಹಾಳದಿಬ್ಬ ಲೈನ್, ಕಲಬಂಡಿಯವರ ಲೈನ್, 2ನೇ ಸ್ಕೂಲ್, ರಹಮತ ನಗರ, 1, 2, 3 ಹಾಗೂ 4ನೇ ಕ್ರಾಸ್, ವಾರ್ಡ್ ನಂ.22ರ ವಿಜಯನಗರ ಶಾಲೆ ಲೈನ್, ವಾರ್ಡ್ ನಂ.28ರ ಪಂಚಾಕ್ಷರಿ ನಗರದ 3ರಿಂದ 6ನೇ ಕ್ರಾಸ್, ವಾರ್ಡ್ ನಂ.27ರ 30 ಸಂಕಣ್ಣವರ ಲೇಔಟ್, ಪುಟ್ಟರಾಜ ನಗರ, ಕೇಶವ ನಗರ ಲೈನ್, ರೋಣದವರ ಲೈನ್, ಎಸ್‌ಬಿಐಯ್ ಆಫೀಸ್ ಲೈನ್, ವಾರ್ಡ್ ನಂ.26ರ



ಕೃಷ್ಣಾ ಟಾಕೀಸ್ ರೋಡ್, ಕಲಾಮಂದಿರ ರೋಡ್, ಜೆ ಟಿ ಮಠ ರೋಡ್, ಅಕ್ಕನಬಳಗ, ಮಾಳೆಕೊಪ್ಪಮಠದ ನಂದಿ, ಚಳ್ಳಮರದ ಲೈನ್, ಗೊಡಚಿಯಾರ ಲೈನ್, ಅಂಗಡಿಯವರ ಲೈನ್, ಬಂಗಾರಶೆಟ್ಟರ ಲೈನ್‌ಗಳಲ್ಲಿ ನೀರು ಪೂರೈಕೆಯಾಗಲಿದ್ದು, ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ವ್ಯತ್ಯಯವಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಪ್ರಕಟಣೆ ತಿಳಿಸಿದೆ.

### ಜಿಲ್ಲಾಧಿಕಾರಿಗಳಿಂದ ಪ್ರಗತಿ ಪರಿಶೀಲನೆ

## ಅತಿವೃಷ್ಟಿಯಿಂದ ಹಾನಿಗೀಡಾದ ಮನೆಗಳಿಗೆ ತ್ವರಿತ ಪರಿಹಾರ ನೀಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಅತಿವೃಷ್ಟಿ ಹಾಗೂ ಪ್ರವಾಹದಿಂದ ಹಾನಿಗೀಡಾದ ಮನೆಗಳ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ ಸರ್ಕಾರ ನಿಗದಿಪಡಿಸಿದ ಮಾರ್ಗಸೂಚಿಗಳನ್ವಯ ತ್ವರಿತ ಪರಿಹಾರ ನೀಡುವಂತೆ ಜಿಲ್ಲಾಧಿಕಾರಿ ವೈಶಾಲಿ. ಎಂ.ಎಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಸೋಮವಾರ ತಾಲೂಕಾ ತಹಸೀಲ್ದಾರರು, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳೊಂದಿಗೆ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ನಿರ್ದೇಶನ ನೀಡಿದರು.

ಅರ್ಹ ಫಲಾನುಭವಿಗಳಿಗೆ ವಿಳಂಭ ಮಾಡದೇ ಪರಿಹಾರ ಕಾರ್ಯ ಕೈಗೊಳ್ಳಬೇಕು. ಹಾಗೂ ಅತಿವೃಷ್ಟಿಯಿಂದ ಸಂಭವಿಸಬಹುದಾದ ಅನಾಹುತಗಳನ್ನು ತಡೆಯಲು ಮುಂಜಾಗೃತಾ ಕ್ರಮಗಳನ್ನು



ಪಾಲಿಸಬೇಕು. ಯಾವುದೇ ಕಾರಣಕ್ಕೂ ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಕೇಂದ್ರ ಸ್ಥಾನ ತೊರೆಯಬಾರದು. ತಪ್ಪಿದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವದೆಂದು ಎಚ್ಚರಿಸಿದರು.

ಕಂದಾಯ ವಿಷಯಗಳ ಕುರಿತಂತೆ ಮಾತನಾಡಿದ ಅವರು, ನ್ಯಾಯಾಲಯ ಪ್ರಕರಣಗಳು, ಆರ್.ಟಿ.ಸಿ., ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ ಕುರಿತು ತಾಲೂಕಾಡಳಿತಗಳಿಂದ ಮಾಹಿತಿ ಪಡೆದು ಶೀಘ್ರ ಬಾಕಿ ಇರುವ ನ್ಯಾಯಾಲಯ ಪ್ರಕರಣಗಳನ್ನು ಪೂರ್ಣಗೊಳಿಸಬೇಕು. ಅರ್ಹರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ ತಲುಪಿಸುವಂತೆ ತಿಳಿಸಿದರು.

ಗೃಹ ಲಕ್ಷ್ಮೀ ಯೋಜನೆ ಜಿಲ್ಲೆಯ ಪಡಿತರ ಚೀಟಿದಾರರ ಕುಟುಂಬದ ಯಜಮಾನಿಗೆ ಪ್ರತಿ ಮಾಹೆ 2000 ರೂ. ನೀಡುವ ಯೋಜನೆಯಾಗಿದೆ. ಈ ಯೋಜನೆಯಡಿ ಈಗಾಗಲೇ ಜಿಲ್ಲೆಯ 1.60 ಲಕ್ಷ ಪಡಿತರದಾರರು ತಮ್ಮ ವಿವರಗಳನ್ನು ನೋಂದಾಯಿಸಿದ್ದು ಶೇ.70 ರಷ್ಟು ಗುರಿ ಸಾಧನೆ ಆಗಿದೆ. ಉಳಿದ ಪಡಿತರ ಚೀಟಿದಾರರ ನೋಂದಣಿ ಕಾರ್ಯ ಶೀಘ್ರ ಪೂರ್ಣಗೊಳಿಸುವ ಮೂಲಕ ಯೋಜನೆಯ ಸದುಪಯೋಗ ಅರ್ಹರೆಲ್ಲರಿಗೂ ತಲುಪಬೇಕು.

ಈ ಕಾರ್ಯದಲ್ಲಿ ತಾಲೂಕಾಡಳಿತಗಳು ಕ್ರಿಯಾಶೀಲವಾಗಿ ಕರ್ತವ್ಯ ನಿರ್ವಹಿಸಿ ಆಗಸ್ಟ್ 5 ರೊಳಗಾಗಿ ನೋಂದಣಿ ಕಾರ್ಯ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಪ್ರಭಾರಿ ಡಿ.ಡಿ.ಪಿ.ಆಯ್ ಗಣಪತಿ ಬಾರಾಟಕ್ಕೆ ಸೇರಿದಂತೆ ಆಯಾ ತಾಲೂಕುಗಳ ತಹಸೀಲ್ದಾರರು, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಹಾಜರಿದ್ದರು.

> ಚುನಾವಣಾ ಆಯೋಗದ ನಿರ್ದೇಶನದಂತೆ ಮನೆ ಮನೆ ಭೇಟಿ ನೀಡಿ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಬೇಕು. ಈ ಕುರಿತು ನಿಯೋಜಿತ ನೌಕರರು ಶೀಘ್ರ ಹಂಚಿಕೆ ಮಾಡಲಾದ ಕರ್ತವ್ಯಗಳನ್ನು ನಿಭಾಯಿಸಬೇಕು. ನಮೂನೆ 6,7,8 ಗಳಲ್ಲಿ ಅರ್ಜಿ ಸ್ವೀಕರಿಸಿ ಪರಿಷ್ಕರಣೆ ಕಾರ್ಯವನ್ನು ಪೂರ್ಣಗೊಳಿಸಬೇಕು. ತಪ್ಪಿದಲ್ಲಿ ಚುನಾವಣಾ ಆಯೋಗದ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

## ಬಟ್ಟಪಾಡಿಯ ಕಡಲ್ಕೊರೆತ ಸ್ಥಳ ಪರಿಶೀಲಿಸಿದ ಸಿಎಂ



■ವಿಜಯಸಾಕ್ಷಿ ಸುದ್ದಿ, ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿ ಪರಿಶೀಲನೆ ಹಾಗೂ ಪ್ರಾಕೃತಿಕ ವಿಕೋಪ ನಿರ್ವಹಣಾ ಸಭೆ ನಡೆಸಲು ಆಗಮಿಸಿದ್ದ ಮುಖ್ಯಮಂತ್ರಿಗ ಸಿದ್ದರಾಮಯ್ಯ, ಮಂಗಳವಾರ ಸಂಜೆ ಉಳ್ಳಾಲ ತಾಲೂಕಿನ ಬಟ್ಟಪಾಡಿಯ ಕಡಲ್ಕೊರೆತ ಹಾನಿ ಪ್ರದೇಶಕ್ಕೆ ಭೇಟಿ ನೀಡಿ, ಪರಿಸ್ಥಿತಿಯನ್ನು ಪರಿಶೀಲಿಸಿ, ಸ್ಥಳೀಯರೊಂದಿಗೆ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್,

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಲ್.ಕೆ. ಅತೀಕ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಸೇರಿದಂತೆ ಹಲವು ಅಧಿಕಾರಿಗಳು ಹಾಗೂ ಮುಖಂಡರು, ಸಂತ್ರಸ್ತರಿದ್ದರು.

### 'ವ್ಯಸನ ಮುಕ್ತ ದಿನಾಚರಣೆ'ಯಲ್ಲಿ ಮಾನಸಿಕ ತಜ್ಞ ಡಾ. ರಾಘವೇಂದ್ರ ಪಾಟೀಲ ಉಪನ್ಯಾಸ

## ವ್ಯಸನ ಮುಕ್ತತೆಗಾಗಿ ವೈದ್ಯರ ಸಲಹೆ ಪಡೆಯಿರಿ

■ವಿಜಯಸಾಕ್ಷಿ ಸುದ್ದಿ, ಗದಗ

ಯುವಜನರು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕು. ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗುವ ಮೂಲಕ ಆರೋಗ್ಯಯುತ ಜೀವನ ನಿಮ್ಮದಾಗಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ ಎಲ್ ಕರೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಮಂಗಳವಾರ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ವ್ಯಸನಮುಕ್ತ ದಿನಾಚರಣೆ'ಯಲ್ಲಿ ಡಾ.



ಮಹಾಂತ ಶಿವಯೋಗಿಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ವ್ಯಸನ ಮುಕ್ತತೆ ಕುರಿತು ಪ್ರತಿಜ್ಞಾ ವಿಧಿ ಬೋಧಿಸಿ ಅವರು ಮಾತನಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ತಜ್ಞರಾದ ಡಾ. ರಾಘವೇಂದ್ರ ಪಾಟೀಲ ಉಪನ್ಯಾಸ ನೀಡಿ, ಸಮಾಜವನ್ನು ವ್ಯಸನಮುಕ್ತವಾಗಿಸುವಲ್ಲಿ ಮಹಾಂತ ಶಿವಯೋಗಿಗಳ ಕೊಡುಗೆ ಅಪಾರವಾಗಿದೆ. ಅವರು ಜೋಳಿಗೆ ಹಿಡಿದುಕೊಂಡು ಭಿಕ್ಷೆ ಬೇಡುತ್ತಿದ್ದರು. ಕೆಟ್ಟ ಹವ್ಯಾಸ, ಕೆಟ್ಟ ಚಟಗಳನ್ನು ಜೋಳಿಗೆಯಲ್ಲಿ ಹಾಕಿ ನಂತರ ಅವುಗಳನ್ನು ತ್ಯಜಿಸಬೇಕೆಂದು ಸಾರ್ವಜನಿಕರಿಗೆ ತಿಳುವಳಿಕೆ ನೀಡುತ್ತಾ ಶ್ರಮಿಸಿದ್ದಾರೆ. ರಾಜ್ಯ ಸರ್ಕಾರ ಪ್ರತಿ ವರ್ಷ ಅಗಸ್ಟ್ 1ರಂದು ಡಾ. ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ 'ವ್ಯಸನ ಮುಕ್ತ ದಿನಾಚರಣೆ' ▸▸3ನೇ ಪುಟಕ್ಕೆ

> ಇಂದಿನ ಯುವಶಕ್ತಿ ದುಶ್ಚಟಗಳ ವ್ಯಸನಕ್ಕೆ ಒಳಗಾಗಿ ಸಾಮಾಜಿಕ ಜವಾಬ್ದಾರಿ ಪೂರೈಸುವಲ್ಲಿ ವಿಫಲರಾಗುತ್ತಿದ್ದಾರೆ. ತಂಬಾಕು, ಅಲ್ಕೋಹಾಲ್, ಹೆರಾಯಿನ್, ಗಾಂಜಾ, ಅಫೀಮು, ಚರಸ್ ಮುಂತಾದ ಮಾದಕ ವಸ್ತುಗಳ ಸೇವನೆಯು ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ದುಷ್ಪರಿಣಾಮಕ್ಕೆ ಕಾರಣವಾಗುತ್ತದೆ. ಇದರ ಅತಿಯಾದ ಸೇವನೆಯಿಂದ ಅಥವಾ ಬಳಕೆಯಿಂದ ವ್ಯಕ್ತಿಯು ವ್ಯಸನಕ್ಕೆ ಒಳಗಾಗಿ ತನ್ನ ದೈನಂದಿನ ಕರ್ತವ್ಯಗಳನ್ನು ಮರೆತು ಕಳ್ಳತನ, ಮೋಸ, ವಂಚನೆಗಳನ್ನು ಮಾಡಿ ಮಾದಕ ವಸ್ತುಗಳ ದಾಸನಾಗುತ್ತಾನೆ. ಇದರಿಂದ ವ್ಯಕ್ತಿಯ ಮೆದುಳಿನ ಸವಕಳಿ, ನರದೌರ್ಬಲ್ಯ ಉಂಟಾಗುತ್ತದೆ.
>
> – ಡಾ. ರಾಘವೇಂದ್ರ ಪಾಟೀಲ.
> ಮಾನಸಿಕ ತಜ್ಞರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

## ರೈತ ಬಾಂಧವರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2023-24ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲ ತಾಲೂಕುಗಳ ಗ್ರಾಮೀಣ ಭಾಗದಲ್ಲಿ ಮಾವು, ತೆಂಗು, ಪೇರಲ, ದ್ರಾಕ್ಷಿ, ದಾಳಿಂಬೆ, ಬಾಳೆ, ಪಪ್ಪಾಯ, ನಿಂಬೆ, ಸೀತಾಫಲ, ಅಂಜೂರ, ನೇರಳೆ, ಬಾರೆ, ಡ್ರ್ಯಾಗನ್ ಹಣ್ಣು, ಗೋಡಂಬಿ, ವಿಳ್ಯೆದೆಲೆ, ಹುಣಸೆ, ಕರಿಬೇವು ಬೆಳೆಗಳ ಪ್ರದೇಶ ವಿಸ್ತರಣೆಗೆ, ಹನಿ ನೀರಾವರಿ ತಾಕುಗಳ ಕಂದಕಗಳನ್ನು ತೆಗೆಯಲು ಹಾಗೂ ಮಣ್ಣು ಸಂರಕ್ಷಣಾ ಕಾಮಗಾರಿಗಳಾದ ಕೃಷಿಹೊಂಡಗಳನ್ನು ಕೈಗೊಳ್ಳಲು ಜಿಲ್ಲೆಯ ರೈತ ಬಾಂದವರಿಗೆ ಉತ್ತಮ ಅವಕಾಶವಿದೆ. ಜಿಲ್ಲೆಯ ಎಲ್ಲ ತಾಲೂಕುಗಳ ಆಸಕ್ತ ರೈತ ಬಾಂಧವರು ಅರ್ಜಿ ಸಲ್ಲಿಸಲು ಸಮೀಪದ ಗ್ರಾಮ ಪಂಚಾಯತ್ ಅಥವಾ ತೋಟಗಾರಿಕೆ ಕಛೇರಿಗೆ ಸಂಪರ್ಕಿಸಬಹುದಾಗಿದೆ.

## ಸ್ವಯಂಪ್ರೇರಣೆಯಿಂದ ಬಿ.ಎಲ್.ಓ. ಕಾರ್ಯನಿರ್ವಹಣೆ ಪ್ರಶಂಸನೀಯ

■ವಿಜಯಸಾಕ್ಷಿ ಸುದ್ದಿ, ಗದಗ

ಸಧೃಢ ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಬ್ಬ ಅರ್ಹ ಮತದಾರರನು ಮತ ಚಲಾಯಿಸುವದು ಅತಿ ಅವಶ್ಯಕವಾಗಿದೆ. ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡುವದರಲ್ಲಿ ಬಿ.ಎಲ್.ಓ.ಗಳ ಪಾತ್ರ ಅತಿ ಪ್ರಮುಖವಾಗಿದೆ. ಈ ಮಹತ್ವದ ಕಾರ್ಯಕ್ಕೆ ಬಿ.ಎಲ್.ಓ.ಗಳಾಗಿ ಹೊಸದಾಗಿ ನೇಮಕವಾದಂತಹ ಶಿಕ್ಷಕರು ಸ್ವಯಂ ಪ್ರೇರಿತರಾಗಿ ಕಾರ್ಯನಿರ್ವಹಿಸಲು ಮುಂದೆ ಬಂದಿರುವದು ಪ್ರಶಂಸನೀಯ ಕಾರ್ಯವಾಗಿದೆ ಎಂದು ಜಿಲ್ಲಾಧಿಕಾರಿ



ವೈಶಾಲಿ.ಎಂ.ಎಲ್. ಅವರು ಹೇಳಿದರು.

ಜಿಲ್ಲಾಡಳಿತ ಭವನದ ತಮ್ಮ ಕಚೇರಿಯಲ್ಲಿ ಭೇಟಿಯಾದ ನೂತನವಾಗಿ ಬಿ.ಎಲ್.ಓ.ಗಳಾಗಿ ನೇಮಕವಾದ ಶಿಕ್ಷಕರುಗಳಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತಿಯೊಬ್ಬ ಅರ್ಹ ಮತದಾರರನು ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಬೇಕು. ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಬಿ.ಎಲ್.ಓ.ಗಳ ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು. ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ▸▸3ನೇ ಪುಟಕ್ಕೆ

### ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ

## ಮೊಬೈಲ್ ಬಳಕೆಯ ಬಗ್ಗೆ ಎಚ್ಚರವಹಿಸಿ

■ವಿಜಯಸಾಕ್ಷಿ ಸುದ್ದಿ, ನರಗುಂದ

ಇಂದಿನ ಆಧುನಿಕ ಸಂದರ್ಭದಲ್ಲಿ ಶಿಕ್ಷಣದ ಪಾತ್ರ ಮುಖ್ಯವಾಗಿದೆ. ವಿದ್ಯಾರ್ಥಿಗಳಿಗೆ ಗುಣಾತ್ಮಕ ಬೋಧನೆಯಿಂದ ಉತ್ತಮ ನಾಗರಿಕರನ್ನು ರೂಪಿಸಲು ಸಾಧ್ಯವಿದೆ. ಪಾಲಕರು, ಶಿಕ್ಷಕರು, ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಪ್ರೋತ್ಸಾಹಿಸಬೇಕು ಎಂದು ನರಗುಂದ ಸಿಪಿಐ ಮಲ್ಲಯ್ಯ ಮಠಪತಿ ಹೇಳಿದರು.

ಪಟ್ಟಣದ ಲಯನ್ಸ್ ಆಂಗ್ಲ



ಮಾಧ್ಯಮ ಶಾಲೆಯಲ್ಲಿ ಮಂಗಳವಾರ 2023-24ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಹಾಗೂ ವಿಜ್ಞಾನ ಕೇಂದ್ರಗಳನ್ನು ಉದ್ಘಾಟಿಸಿ ಮಾತನಾಡಿದರು.

ಮೊಬೈಲ್ ಬಳಕೆಯ ಬಗ್ಗೆ ವಿದ್ಯಾರ್ಥಿನಿಯರು ಎಚ್ಚರ ವಹಿಸಬೇಕು. ▸▸3ನೇ ಪುಟಕ್ಕೆ

## ಉಪವಿಭಾಗಾಧಿಕಾರಿಯಾಗಿ ಡಾ.ವೆಂಕಟೇಶ ನಾಯ್ಕ ಅಧಿಕಾರ ಸ್ವೀಕಾರ

■ವಿಜಯಸಾಕ್ಷಿ ಸುದ್ದಿ, ಗದಗ

ಸರ್ಕಾರದ ಆದೇಶದಂತೆ ಗದಗ ಉಪವಿಭಾಗಾಧಿಕಾರಿಯಾಗಿ ಡಾ.ವೆಂಕಟೇಶ ನಾಯ್ಕ ಅವರು ಸೋಮವಾರ ಉಪವಿಭಾಗಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿದರು. ಇವರು 2014ರ ಬ್ಯಾಚ್ ನ ತಹಸೀಲ್ದಾರ ಆಗಿ ಸೇವೆ ಆರಂಭಿಸಿದರು. ಗದಗ ಜಿಲ್ಲೆಯ ಮುಂಡರಗಿ, ಗಜೇಂದ್ರಗಡ, ರೋಣ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ, ಮೂಡಬಿದರೆ ತಾಲೂಕುಗಳಲ್ಲಿ ತಹಸೀಲ್ದಾರರಾಗಿ ಕಾರ್ಯನಿರ್ವಹಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧಿನಾಧಿಕಾರಿ ಹಾಗೂ ಚಿತ್ರದುರ್ಗ ರೈಲ್ವೆ ಯೋಜನೆಗಳ ವಿಶೇಷ ಭೂಸ್ವಾಧಿನಾಧಿಕಾರಿಯಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದು



ಡಾ. ವೆಂಕಟೇಶ ನಾಯ್ಕ ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನವರಾಗಿದ್ದಾರೆ. ಗದಗ ಉಪವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಇವರಿಗೆ ಜಿಲ್ಲೆಯ ಎಲ್ಲ ತಹಸೀಲ್ದಾರರು ಹಾಗೂ ಉಪವಿಭಾಗಾಧಿಕಾರಿ ಕಚೇರಿಯ ಅಧಿಕಾರಿ, ಸಿಬ್ಬಂದಿ ವರ್ಗ ಶುಭಕೋರಿದ್ದಾರೆ.

### ಎಸ್‌ಎಸ್‌ಕೆ ಸಮಾಜಕ್ಕೆ ಪ್ರತ್ಯೇಕ ನಿಗಮ ರಚನೆಗೆ ಒತ್ತಾಯಿಸಿ ಸಚಿವರಿಗೆ ಮನವಿ

## ಸಮಾಜ ಬಾಂಧವರನ್ನು ಮುಖ್ಯವಾಹಿನಿಗೆ ತರಲು ಕ್ರಮವಹಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಎಸ್‌ಎಸ್‌ಕೆ ಸಮಾಜ ಬಾಂಧವರು ರಾಜಕೀಯವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸಾಕಷ್ಟು ಹಿಂದುಳಿದಿದ್ದು, ಎಸ್‌ಎಸ್‌ಕೆ ಸಮಾಜಕ್ಕೆ ಪ್ರತ್ಯೇಕ ನಿಗಮ ರಚನೆ ಮಾಡುವ ಮೂಲಕ ಸಮಾಜ ಬಾಂಧವರನ್ನು ಮುಖ್ಯವಾಹಿನಿಗೆ ತರಬೇಕಾಗಿದೆ ಎಂದು ಗದಗ ಎಸ್‌ಎಸ್‌ಕೆ ಸಮಾಜ ಪಂಚ ಕಮಿಟಿ, ತರುಣ ಸಂಘ ಹಾಗೂ ಮಹಿಳಾ ಮಂಡಳ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ



ಕಮಿಟಿಯ ಗೌರವ ಕಾರ್ಯದರ್ಶಿ ವಿನೋದ ಶಿದ್ಲಿಂಗ, ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದವರು ಕರ್ನಾಟಕದಲ್ಲಿ ಅಂದಾಜು 17 ಲಕ್ಷಕ್ಕಿಂತ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಶೈಕ್ಷಣಿಕವಾಗಿ, ರಾಜಕೀಯವಾಗಿ ಸಾಕಷ್ಟು ಹಿಂದುಳಿದಿದ್ದೇವೆ. ಅವರನ್ನು ಆರ್ಥಿಕವಾಗಿ ಸದೃಢಗೊಳಿಸಲು ಹಾಗೂ ಸಮಾಜದ ಮುಖ್ಯವಾಹಿನಿಗೆ ಕರೆತರಲು ನಮ್ಮ ಎಸ್‌ಎಸ್‌ಕೆ ಸಮಾಜಕ್ಕೆ ಪ್ರತ್ಯೇಕ ನಿಗಮ ನೀಡಬೇಕೆಂದು ಒತ್ತಾಯಿಸಿದರು.

ಪಂಚ ಕಮಿಟಿ ಮಾಜಿ ಅಧ್ಯಕ್ಷ ಪ್ರಭು ಬುರಬುರೆ ಮಾತನಾಡಿ, ನಮ್ಮ ಸಮುದಾಯಕ್ಕೆ ಅಭಿವೃದ್ಧಿ ನಿಗಮ ಮಂಡಳ ಸ್ಥಾಪಿಸಬೇಕು ಮತ್ತು ಗದಗ ನಗರದಲ್ಲಿ ಸಹಸ್ರಾರ್ಜುನ ಸಮುದಾಯ ಭವನ ನಿರ್ಮಾಣ ಮಾಡಿ, ಸಹಸ್ರಾರ್ಜುನ ಜಯಂತಿಯನ್ನು ಸರಕಾರದ ವತಿಯಿಂದ ಆಚರಿಸುವಂತೆ ಆದೇಶ ನೀಡಬೇಕೆಂದು ಸಚಿವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗದಗ ಎಸ್‌ಎಸ್‌ಕೆ ಸಮಾಜ ಪಂಚ ಕಮಿಟಿ ಅಧ್ಯಕ್ಷ ಫಕೀರಸಾ ಬಾಂಡಗೆ, ಉಪಾಧ್ಯಕ್ಷ ರಾಜು ಬದಿ, ಸಹ ಕಾರ್ಯದರ್ಶಿ ರವಿ ಶಿದ್ಲಿಂಗ, ಸದಸ್ಯರಾದ ಸುರೇಶಕುಮಾರ ಬದಿ, ಬಲರಾಮ ಬಸವಾ, ಎನ್ ಆರ್ ಖಟವಟೆ, ▸▸3ನೇ ಪುಟಕ್ಕೆ

> ನಮ್ಮ ಸಮಾಜ ಬಾಂಧವರು ಸ್ವಾಭಿಮಾನಿಗಳಾಗಿರುವದರಿಂದ ಕೋಲ್ಡ್ರಿಂಕ್ಸ್, ಸಾವಜಿ ಹೋಟೆಲ್, ವಾಚ್ ರಿಪೇರಿ, ಜವಳಿ ಕೈಮಗ್ಗ, ಆಟೋ ಗ್ಯಾರೇಜ್, ಟೇಲರ್, ಬೀದಿಬದಿ ವ್ಯಾಪಾರ, ಮೊಬೈಲ್ ರಿಪೇರಿ, ಕಿರಾಣಿ ವ್ಯಾಪಾರ ಸೇರಿದಂತೆ ಸಣ್ಣಪುಟ್ಟ ಕಸಬು ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.
>
> – ವಿನೋದ ಶಿದ್ಲಿಂಗ.
> ಗೌ. ಕಾರ್ಯದರ್ಶಿ, ಎಸ್‌ಎಸ್‌ಕೆ ಸಮಾಜ ಪಂಚ ಕಮಿಟಿ.

## ಗೃಹಲಕ್ಷ್ಮೀ ಯೋಜನೆಯ ನೋಂದಣಿ



■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮೀ ಯೋಜನೆಯ ಅನುಷ್ಠಾನವು ರಾಜ್ಯಾದ್ಯಂತ ಸಾಗಿದ್ದು, ಗದಗ-ಬೆಟಗೇರಿ ಅವಳಿ ನಗರದ 23ನೇ ವಾರ್ಡ್‌ನಲ್ಲಿ ನಗರಸಭೆಯ ಸದಸ್ಯ ಜನಾಬ ಬರಕತಲಿ ಮುಲ್ಲಾ ನೇತೃತ್ವದಲ್ಲಿ, ಸೌಜನ್ಯತಾ ಸಮಗ್ರ ನಾಗರಿಕ ಹಿತರಕ್ಷಣಾ ಸಮಿತಿಯ ಸಂಯುಕ್ತಾಶ್ರಯಾದಲ್ಲಿ ಮಂಗಳವಾರ ಯೋಜನೆಯ ಅರ್ಜಿಗಳನ್ನು ಪ್ರಜಾಪ್ರತಿನಿಧಿಗಳ ನೆರವಿನೊಂದಿಗೆ ಸಲ್ಲಿಸಲಾಯಿತು.

750ಕ್ಕೂ ಹೆಚ್ಚು ಮಹಿಳೆಯರು ಈ ಸಂದರ್ಭದಲ್ಲಿ ಅರ್ಜಿ ಸಲ್ಲಿಸಿದರು. ಮುಖಂಡರಾದ ಖಾದರ ಕಿರೆಸೂರ ಆಸಿಫ್ ಮುಲ್ಲಾ, ರೇಷ್ಮಾ ಬಿನ್ನಾಳ, ಮೆಹಬೂಬ ಶಾಹಿದ್ ಮುಲ್ಲಾ, ಪ್ರವೀಣ ಜಂತ್ಲಿ, ಬಸಣ್ಣ ಸತ್ಯೆಪ್ಪನವರ, ಬಸವರಾಜ ಗಡ್ಡೆಪ್ಪನವರ, ರಫಿಕ್ ಆದವಾನಿ, ಶಮೀರ್ ಜಮಾದಾರ, ಫಲಾನುಭವಿಗಳಾದ ಹನಮವ್ವ ಮೆಣಸಗಿ, ಆಯಿಷಾ ಖಾಜೀ, ರೊಹಿಮಾಬೇಗಂ ಶೇಖ,ಂ ಯಾಸ್ಮೀನ್ ಶಿರಹಟ್ಟಿ, ಸಹನಾ ರಾಘವೇಂದ್ರ ಪಾಲನಕರ, ಮಲ್ಲವ್ವ ನಾಡಗೌಡರ, ಸಾಮಾಜಿಕ ಕಾರ್ಯಕರ್ತ ರಾಘವೇಂದ್ರ ಪಾಲನಕರ ಹಾಗೂ ಓಣಿಯ ಸಮಸ್ತ ಗುರುಹಿರಿಯರು ಉಪಸ್ಥಿತರಿದ್ದರು.

## ಧಾರ್ಮಿಕ ಕ್ಷೇತ್ರಗಳಿಗೆ ಅನುದಾನ: ಸಚಿವರಿಗೆ ಅಭಿನಂದನೆ

■ವಿಜಯಸಾಕ್ಷಿ ಸುದ್ದಿ, ಗದಗ

ಈಲ್ಲೆಯ ಧಾರ್ಮಿಕ ಕೇಂದ್ರಗಳ ನವೀಕರಣಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಿದ ಸಚಿವ ಎಚ್ ಕೆ ಪಾಟೀಲರಿಗೆ ಸಾಮಾಜಿಕ ಕಾರ್ಯಕರ್ತ ಹಾಗೂ ಕಾಂಗ್ರೆಸ್ ಮುಖಂಡ ಸೈಯದ್ ಖಾಲಿದ್ ಕೊಪ್ಪಳ ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ನೀಡಿದ ಪತ್ರಿಕಾ ಪ್ರಕಟಣೆಯಲ್ಲಿ, ಎಚ್ ಕೆ ಪಾಟೀಲರು ಅಧಿಕಾರ ವಹಿಸಿಕೊಂಡ ಕೇವಲ ಎರಡು ತಿಂಗಳಗಳಲ್ಲಿ ಜಿಲ್ಲೆಯ ಅನೇಕ ಧಾರ್ಮಿಕ ಕ್ಷೇಥ್ರಗಳ ಅಭಿವೃದ್ಧಿ, ನವೀಕರಣಕ್ಕಾಗಿ ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಒದಗಿಸಿದ್ದಾರೆ. ವೀರನಾರಾಯಣ ದೇವಸ್ಥಾನ, ವೆಂಕಟೇಶ್ವರ ದೇಗುಲ, ಜುಮ್ಮಾ



ಮಸೀದಿ, ಶಿರಹಟ್ಟಿ ಫಕೀರೇಶ್ವರ ಮಠಕ್ಕೆ ತಲಾ ಒಂದು ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದಾರೆ. ನುಡಿದಂತೆ ನಡೆದು, ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಈ ಮೊತ್ತವನ್ನು ಬಿಡುಗಡೆ ಮಾಡಿದ ಎಚ್ ಕೆ ಪಾಟೀಲರಿಗೆ ಹಾರ್ದಿಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

### ಸಾಂಕ್ರಾಮಿಕವಾಗಿ ವ್ಯಾಪಿಸುತ್ತಿರುವ 'ಮದ್ರಾಸ್ ಐ' ಕುರಿತು ಅರಿತುಕೊಳ್ಳಿ

# ಮುನ್ನೆಚ್ಚರಿಕೆಯಿಂದ ಕಣ್ಣುಬೇನೆಯನ್ನು ದೂರವಿರಿಸೋಣ

ಕೋವಿಡ್ 19 ಸಾಂಕ್ರಾಮಿಕದ ಬಳಿಕ ಮತ್ತೊಂದು ಆರೋಗ್ಯ ಸಮಸ್ಯೆ ದೇಶದಲ್ಲಿ ಆತಂಕಕ್ಕೆ ಕಾರಣವಾಗಿದೆ. ದೇಶದ ಮೂಲೆ ಮೂಲೆಯಲ್ಲಿಯೂ ಜನರಲ್ಲಿ ಕಣ್ಣಿನ ಸೋಂಕು ಕಾಣಿಸಿಕೊಳ್ಳುತ್ತಿದೆ. ಸತತವಾಗಿ ನೀರು ಹರಿಯುವುದು, ಕಿರಿಕಿರಿ, ತುರಿಕೆ, ಕಣ್ಣು ರೆಪ್ಪೆಗಳು ಬಾತುಕೊಳ್ಳುವುದು, ಕೆಂಪಾಗುವುದು ಮತ್ತು ಕಣ್ಣುಗಳಲ್ಲಿ ವಿಪರೀತ ನೋವು-ಇದು ಇತ್ತೀಚಿನ ಕೆಲವು ದಿನಗಳಲ್ಲಿ ಕಂಡುಬರುತ್ತಿರುವ ಸಾಮಾನ್ಯ ಸಮಸ್ಯೆಗಳು. ಮುಖ್ಯವಾಗಿ ಉತ್ತರ ಭಾರತದ ಅನೇಕ ಭಾಗಗಳಲ್ಲಿ ಜನರು ಕಣ್ಣಿನ ಕ್ಲಿನಿಕ್ ಮತ್ತು ಆಸ್ಪತ್ರೆಗಳಿಗೆ ಎಡತಾಕುತ್ತಿದ್ದು, ಕರ್ನಾಟಕದಲ್ಲಿಯೂ ಸಾಮೂಹಿಕ 'ಮದ್ರಾಸ್ ಐ' ಪ್ರಕರಣಗಳು ವರದಿಯಾಗುತ್ತಿವೆ.

ಪಿಂಕ್ ಐ ಎಂದೂ ಎಂತಲೂ ಕರೆಯಲ್ಪಡುವ ಈ ಸೋಂಕು ಕಣ್ಣಿನ ರೆಪ್ಪೆ ಮತ್ತು ಕಣ್ಣಿನ ಮೇಲ್ಟ್ರ ಊದಿಕೊಂಡಾಗ ಮತ್ತು ವೈರಲ್ ಸೋಂಕಿನಿಂದ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಮದ್ರಾಸ್ ಐಗೆ ಕಾರಣವಾಗುವ ಅಡೆನೊವೈರಸ್ ಅನ್ನು ಮೊದಲು 1918ರಲ್ಲಿ ಮದ್ರಾಸಿನಲ್ಲಿ ಗುರುತಿಸಲಾಯಿತು. ವಿಪರೀತ ಮಳೆ ಹಾಗೂ ಶೀತ ವಾತಾವರಣದ ಸನ್ನಿವೇಶವೇ ಕಣ್ಣಿನ ಸೋಂಕು ಸಮಸ್ಯೆಗೆ ಕಾರಣ.



* ಸಮಸ್ಯೆ ಇರುವವರು ಕೆಲದಿನ ಪ್ರತ್ಯೇಕ ವಾಸ ಮಾಡಿ.
* ಲಕ್ಷಣಗಳು ಕಾಣಿಸಿಕೊಳ್ಳದೆ ಕಣ್ಣಿಗೆ ಔಷಧ ಹಾಕಿಸಿಕೊಳ್ಳಬೇಡಿ.
* ದಿನಕ್ಕೆ 8-10 ಬಾರಿ ಸ್ಯಾನಿಟೈಸರ್, ಸೋಪು ಬಳಸಿ ಕೈ ತೊಳೆದುಕೊಳ್ಳಿ.
* ವೈರಸ್ ಕಾಣಿಸಿಕೊಂಡಾಗ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಸಲಹೆ ಪಡೆಯಬೇಕು.
* ವೈದ್ಯರ ತಪಾಸಣೆ ಮಾಡಿಸದೇ, ಔಷಧಿ ಅಂಗಡಿಗಳಲ್ಲಿ ಸಿಗುವ ಡ್ರಾಪ್ಸ್‌ಗಳನ್ನು ಬಳಸಬಾರದು.
* ಪದೇ ಪದೇ ಕಣ್ಣು ಮುಟ್ಟಿಕೊಳ್ಳುವುದನ್ನು ಕಡಿಮೆ ಮಾಡಬೇಕು.
* ಸಮಸ್ಯೆ ಉಳ್ಳವರು ಇತರರಿಂದ ದೂರ ಇರಬೇಕು
* ವೈದ್ಯರ ಬಳಿ ತೋರಿಸಿಯೇ ಔಷಧಿ ಬಳಸಿ, ಸಮಸ್ಯೆ ಕಡಿಮೆ ಆಗುವವರೆಗೆ ಗಾಳಿಗೆ ಹೋಗಬಾರದು.
* ದ್ವಿಚಕ್ರ ವಾಹನ ಓಡಿಸಬಾರದು. ಟಿ.ವಿ, ಮೊಬೈಲ್, ಕಂಪ್ಯೂಟರ್‌ಗಳನ್ನು ನೋಡುವುದನ್ನು ಕಡಿಮೆ ಮಾಡಿ ಕಣ್ಣಿಗೆ ವಿಶ್ರಾಂತಿ ಕೊಡಬೇಕು.

ಸಾಮಾನ್ಯವಾಗಿ 'ಮದ್ರಾಸ್ ಐ' ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಪ್ರಸ್ತುತ ಕಣ್ಣಿನ ಸೋಂಕು ವ್ಯಾಪಿಸಲು

* ಸೋಂಕು ಇರುವ ವ್ಯಕ್ತಿ ಯಾವುದೇ ಜಾಗವನ್ನು ಸ್ಪರ್ಶಿಸಿದರೆ, ಅದು ಕಲುಷಿತಗೊಳ್ಳುತ್ತದೆ. ನೀವು ಆ ಜಾಗವನ್ನು ಮುಟ್ಟಿ, ಬಳಿಕ ಕಣ್ಣುಗಳನ್ನು ಸ್ಪರ್ಶಿಸಿದರೆ ನಿಮ್ಮ ಕಣ್ಣಿಗೂ ಸೋಂಕು ತಗುಲುತ್ತದೆ.
* ಪ್ರತಿ ಎರಡು ಗಂಟೆಗೆ ಒಮ್ಮೆ ಕೈಗಳನ್ನು ಸ್ಯಾನಿಟೈಸ್ ಮಾಡಿಕೊಳ್ಳಬೇಕು. ಇಲ್ಲವೇ ಸೋಪು ಹಾಗೂ ನೀರಿನಿಂದ ಕೈಗಳನ್ನು ತೊಳೆದುಕೊಳ್ಳಬೇಕು. ಕಣ್ಣುಗಳನ್ನು ಮುಟ್ಟಿಕೊಳ್ಳದೆ ಇರುವುದು ಸೋಂಕಿನಿಂದ ತಪ್ಪಿಸಿಕೊಳ್ಳುವ ಪ್ರಮುಖ ಅಭ್ಯಾಸಗಳಲ್ಲಿ ಒಂದು. ಸಾರ್ವಜನಿಕ ಸ್ಥಳಗಳು, ಗುಂಪುಗಳಿಂದ ದೂರ ಇರುವುದು ಒಳಿತು.
* ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುವುದು, ಕಣ್ಣು ಕೆಂಪಾಗುವುದು ಮುಂತಾದವು ಕಂಡುಬಂದರೆ ಕಾಂಟ್ಯಾಕ್ಟ್ ಲೆನ್ಸ್ ಧರಿಸಬಾರದು.
* ಕಣ್ಣಿನ ಸೋಂಕು ಹೊಂದಿರುವ ವ್ಯಕ್ತಿಯ ಟವೆಲ್, ಕರ್ಚೀಫ್ ಮುಟ್ಟದೆ ಇರುವುದು, ಅವರ ಜತೆ ಮಲಗದೆ ಇರುವುದು ಒಳಿತು. ಸ್ವಯಂ ಚಿಕಿತ್ಸೆ ಅಪಾಯಕಾರಿಯಾಗಬಹುದು.

ಮುಖ್ಯವಾಗಿ ಅಡೆನೋವೈರಸ್ ಕಾರಣ. ಅಡೆನೋವೈರಲ್ ಕಣ್ಣು ಬೇನೆಯು ತಾನಾಗಿಯೇ ಶಮನಗೊಳ್ಳುತ್ತದೆ ಮತ್ತು, ಇದರ ವಿರುದ್ಧ ಯಾವುದೇ ನಿರ್ದಿಷ್ಟ ಆಂಟಿ ವೈರಲ್ ಚಿಕಿತ್ಸೆಯು ಪರಿಣಾಮಕಾರಿಯಾಗಲಾರದು.

ಕಣ್ಣಿನ ಸೋಂಕು ತಡೆಯಲು ಮುಖ್ಯವಾಗಿ ಜನರು ಕೈಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳಬೇಕು. ಈ ವೈರಾಣುಗಳು ಗಾಳಿ ಮೂಲಕ ಅಥವಾ ಇನ್ನೊಬ್ಬರನ್ನು ನೋಡುವುದರ ಮೂಲಕ ಹರಡುವುದಿಲ್ಲ. ಹೀಗಾಗಿ ನೀವು ಕಣ್ಣು ಮತ್ತು ಕೈ ನಡುವಿನ ಸಂಪರ್ಕವನ್ನು ತಡೆಯಬೇಕು.

ರೋಗದ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣವೇ ಸಮೀಪದ ನಗರ, ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಜಿಲ್ಲಾ ಆಸ್ಪತ್ರೆಗೆ ಭೇಟಿ, ವೈದ್ಯರ ಹತ್ತಿರ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯುವುದು ಸೂಕ್ತ. ವೈರಾಣುವಿನ ಸಮಸ್ಯೆ ಆಗಿರುವ ಕಾರಣ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಮುನ್ನೆಚ್ಚರಿಕೆಯೇ ಮದ್ದಾಗಿದೆ.

ಕಣ್ಣಿನಿಂದ ಸುರಿಯುವ ನೀರು ಅಥವಾ ಬಿಳಿ ದ್ರವ ಅಪಾಯಕಾರಿ. ಸೋಂಕು ಹೊಂದಿರುವವರು ಪ್ರತ್ಯೇಕ ಹಾಸಿಗೆ, ತಲೆದಿಂಬು ಬಳಸುವುದು ಉತ್ತಮ. ಕನ್ನಡಕವನ್ನು ಧರಿಸಬೇಕು. ಜನಸಂದಣಿಯಿರುವ ಸ್ಥಳಗಳಿಗೆ ಹೋಗುವುದನ್ನು ಆದಷ್ಟು ತಪ್ಪಿಸುವುದು ಒಳಿತು. ಮಕ್ಕಳಲ್ಲಿ ಮದ್ರಾಸ್ ಐ ಸೋಂಕು ತಗುಲಿದರೆ ಅವರು ಗುಣಮುಖರಾಗುವವರೆಗೆ ಶಾಲೆಗೆ ಕಳುಹಿಸದಿರುವುದು ಉತ್ತಮ. ಸಾಮಾನ್ಯವಾಗಿ ಜನರು ನಂಬಿರುವಂತೆ ದೇಹದ ಉಷ್ಣತೆ ಹೆಚ್ಚಳದಿಂದ ಬರುವ ರೋಗವಲ್ಲ. ಕಣ್ಣಿಗೆ ಸಂಬಂಧಿಸಿದ (ಮದ್ರಾಸ್ ಐ) ಇತರೆ ಸಾಂಕ್ರಾಮಿಕ ರೋಗಗಳು ಉಂಟಾಗುವ ಸಂಭವ ಇರುವದರಿಂದ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವ ಮೂಲಕ ರೋಗ ಹರಡುವುದನ್ನು ತಡೆಬಹುದು.



– ಎಂ ಎಚ್ ಸವದತ್ತಿ.
ವಿಜ್ಞಾನ ಸಹ ಶಿಕ್ಷಕರು,
ಏಕಲಾಸಪೂರ.

## ವಸತಿ ಶಾಲೆಗೆ ಶಾಸಕಿ ಎಂ ಪಿ ಲತಾ ದಿಢೀರ್ ಭೇಟಿ

■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ

ತಾಲೂಕಿನ ಅನಂತನಹಳ್ಳಿ ಬಳಿಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ದಿಢೀರ್ ಭೇಟಿ ನೀಡಿದ ಶಾಸಕಿ ಎಂ ಪಿ ಲತಾ ಮಲ್ಲಿಕಾರ್ಜುನ ಮಕ್ಕಳಿಗೆ ನೀಡುವ ಊಟ, ವಸತಿ ಹಾಗೂ ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿ ಪಡೆದರು.

ಸೋಮವಾರ ಸಂಜೆ ವಸತಿ ನಿಲಯಕ್ಕೆ ಬೇಟಿ ನೀಡಿದ ಅವರು, ನಿಲಯದ ವಿದ್ಯಾರ್ಥಿಗಳಿಂದ ಅಹವಾಲುಗಳನ್ನು ಆಲಿಸಿದರು. ನಿಲಯ ಪಾಲಕರು, ಶಿಕ್ಷಕರು ಹಾಗೂ ಸಿಬ್ಬಂದಿಗಳಿಗೆ ವಸತಿ ನಿಲಯದ ಸ್ವಚ್ಛತೆಗೆ ಆದ್ಯತೆ ನೀಡುವಂತೆ



ತಿಳಿಸಿದರು. ಮಕ್ಕಳ ಊಟವನ್ನು ಖುದ್ದು ಸೇವಿಸಿ ಪರಿಶೀಲಿಸಿದರು. ಯಾವುದೇ ಸಮಸ್ಯೆ ಹಾಗೂ ಬೇಡಿಕೆಗಳಿಗೆ ಹಿಂಜರಿಯದೇ ನೇರವಾಗಿ ತಮ್ಮನ್ನು ಸಂಪರ್ಕಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಹೆಚ್ ಎಂ ಮಲ್ಲಿಕಾರ್ಜುನ, ಬಸದವರಾಜ ಮತ್ತರೂ, ನಾಗರಾಜ ಸಾಸ್ವಿಹಳ್ಳಿ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

## ಪ್ರಾಮಾಣಿಕ ವರದಿಗೆ ಮಹತ್ವ ನೀಡಿ: ಅಕ್ಷಯ ಪಾಟೀಲ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಿಮ್ಮ ಬರವಣಿಗೆ ಸಮಾಜವನ್ನು ತಿದ್ದಲು ಸಹಾಯಕವಾಗಬೇಕು. ಸಮಾಜದ ಓರೆ-ಕೋರೆಗಳನ್ನು ಎತ್ತಿ ತೋರಿಸಿ, ಅವುಗಳ ನಿವಾರಣೆಗೆ ನೀವು ಕಾರಣರಾಗಬೇಕು. ಅಂದಾಗಲೇ ಪತ್ರಿಕಾ ಧರ್ಮಕ್ಕೊಂದು ಗೌರವ ದೊರಕಲು ಸಾಧ್ಯ. ನೀವು ಪ್ರಾಮಾಣಿಕ ಮತ್ತು ವಸ್ತುನಿಷ್ಠ ವರದಿಗೆ ಮಹತ್ವ ನೀಡಬೇಕೆಂದು ಯುವ ಮುಖಂಡ ಅಕ್ಷಯ ಪಾಟೀಲ ಹೇಳಿದರು.

ನರೇಗಲ್ಲ ಹೋಬಳಿ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶನಿವಾರ ಮಧ್ಯಾಹ್ನ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಿಕೆಗಳು ಸಮಾಜದ ಪ್ರತೀ ವಿದ್ಯಮಾನದ ಮೇಲೆ ಕಣ್ಣಿಡುವುದರ ಮೂಲಕ ನಾಡಿನ ಪ್ರಗತಿಗೆ ಶ್ರಮಿಸುತ್ತವೆ. ಕನ್ನಡ ಪತ್ರಿಕೆಗಳು ಇಂದಿನ ಸ್ಪರ್ಧಾತ್ಮಕ



ಯುಗದಲ್ಲೂ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿ ನಾಗರಿಕ ಬದುಕಿನಲ್ಲಿ ವಿಶಿಷ್ಟ ಸ್ಥಾನಮಾನವನ್ನು ತನ್ನದಾಗಿಸಿಕೊಂಡಿವೆ ಎಂದು ಅಭಿಪ್ರಾಯಪಟ್ಟರು.

ನಿವೃತ್ತ ಶಿಕ್ಷಕ ಎಂ ಎಸ್ ಧಡೆಸೂರಮಠ ಉಪನ್ಯಾಸ ನೀಡಿ, ದೇಶದ ಅಭಿವೃದ್ಧಿ, ಏಕತೆ, ಸಮಾಜದಲ್ಲಿ ಸಾಮರಸ್ಯ ಕಾಪಾಡುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದು. ಪತ್ರಕರ್ತರು ಯಾವುದೇ ಆಮಿಷಕ್ಕೆ ಒಳಗಾಗದೆ ಸತ್ಯವನ್ನು ಸಮಾಜಕ್ಕೆ ತೋರಿಸಬೇಕು. ಸಮಾಜದಲ್ಲಿ ನೊಂದವರ, ಬಡವರ ಧ್ವನಿಯಾಗಿ ಕೆಲಸ ಮಾಡಬೇಕು ಎಂದರು.

ನರೇಗಲ್ಲ ಹೋಬಳಿ ಕಾನಿಪ ಅಧ್ಯಕ್ಷ ಈಶ್ವರ ಬೆಟಗೇರಿ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಕೀರ್ತಿ ಮೆಣಸಗಿ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಮುಖಂಡರಾದ ಶಿವನಗೌಡ ಪಾಟೀಲ, ಅನ್ನದಾನೇಶ್ವರ ಶಿಕ್ಷಣ ಸಂಸ್ಥೆಯ ಸದಸ್ಯ ನಿಂಗನಗೌಡ ಲಕ್ಕನಗೌಡ್ರ ವೇದಿಕೆಯಲ್ಲಿದ್ದರು. ಕಿಸಾನ ಸಂಘದ ಸದಸ್ಯರು, ನರೇಗಲ್ ಹೋಬಳಿ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರು ಉಪಸ್ಥಿತರಿದ್ದರು.

### ಕೃತಪುರ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಸಭೆಯಲ್ಲಿ ಮಹೇಶ ಕೋಟಿ

# ಜಾಮೀನುದಾರನೂ ಸಾಲಗಾರನಷ್ಟೇ ಹೊಣೆಗಾರ



ಸಂಘದ ಉಪಾಧ್ಯಕ್ಷ ಪ್ರೇಮನಾಥ ಬಣ್ಣದ ವಾರ್ಷಿಕ ವರದಿ, ಲಾಭ-ಹಾನಿ ಪತ್ರಿಕೆಯನ್ನು ಸಭೆಗೆ ಸಾದರಪಡಿಸಿ, 31-3-2023ಕ್ಕೆ ಕೊನೆಗೊಂಡ ಸಹಕಾರ ವರ್ಷದ ಅವಧಿಯಲ್ಲಿ ರೂ. 2,50,25,443 ಗಳಷ್ಟು ವ್ಯವಹಾರ ನಡೆಸಿದ್ದು, ರೂ. 8,03,740 ನಿವ್ವಳ ಲಾಭವನ್ನು ಹೊಂದಿದೆ. ಸಹಕಾರಿಯ ಸದಸ್ಯರಿಗೆ ಶೇರು ಹಣದ ಮೇಲೆ ಶೇ.8ರಷ್ಟು ಡಿವಿಡೆಂಡ್ ವಿತರಿಸಲು ಶಿಫಾರಸ್ಸು ಮಾಡಲಾಗಿದೆ. 747 ಸದಸ್ಯರನ್ನು ಹೊಂದಿರುವ ನಮ್ಮ ಸಹಕಾರಿಯು ರೂ.12,20,000 ಶೇರು ಬಂಡವಾಳ ಹೊಂದಿದೆ. ರೂ 41,43,767 ಕಾಯ್ದಿಟ್ಟ ನಿಧಿಯಾಗಿದ್ದು ರೂ. 71,11,530 ಇತರ ನಿಧಿಯಾಗಿದೆ. ರೂ. 90,36,349 ಒಟ್ಟು ಠೇವು ಮೊತ್ತವಾಗಿದೆ ಎಂದರು.

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಕೃತಪುರ ಅರ್ಬನ್ ಸೌಹಾರ್ದ ಪತ್ತಿನ ಸಹಕಾರಿ ನಿ. ಪ್ರಗತಿಯೊಂದಿಗೆ ಮುನ್ನಡೆದಿದೆ ಎಂದು ಅಧ್ಯಕ್ಷ ಮಹೇಶ ಕೋಟಿ ಹೇಳಿದರು.

ಅವರು ಸೋಮವಾರ ನಗರದ ಕಲ್ಯಾಣ ಬಸವೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಸಂಘದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾಲಗಾರರಿಗೆ ಜಾಮೀನು ಆಗುವುದೆಂದರೆ, ಸಾಲಗಾರನಷ್ಟೇ ಜಾಮೀನುದಾರನೂ ಹೊಣೆಗಾರನಾಗುತ್ತಾನೆ ಎಂದ ಅವರು, ಸಹಕಾರಿ ಸಂಘ-ಸಂಸ್ಥೆಗಳಿಗೆ ಠೇವಣಿದಾರರು, ಶೇರುದಾರರೇ ಬಂಡವಾಳವಿದ್ದಂತೆ. ಸರ್ವರ ಸಹಕಾರ ಇದ್ದಲ್ಲಿ ಮಾತ್ರ ಸಂಘ ಪ್ರಗತಿ ಕಾಣಲು ಸಾಧ್ಯ ಎಂದರು.

ಲೆಕ್ಕತಪಾಸಿಗರಾದ ಶಿವಕುಮಾರ ಶೆಲ್ಲಿಕೇರಿ, ಪ್ರಕಾಶ ಬೇಲಿ, ಸಹಕಾರಿ ಸದಸ್ಯರಾದ ಅಣವೀರಪ್ಪ ದೊಡಕುಂಡಿ ಮಾತನಾಡಿದರು. ಸಹಕಾರಿ ಪ್ರಗತಿಗೆ ಶ್ರಮಿಸಿದ ಸಂಸ್ಥೆಯ ವ್ಯವಸ್ಥಾಪಕ ರಮೇಶ ಪಿಳ್ಳಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯ ಮೇಲೆ ನಿರ್ದೇಶಕರಾದ ಬಸವರಾಜ ರಾಮನಕೊಪ್ಪ, ತೋಂಟೇಶ ಮಾನ್ವಿ, ಬಸವರಾಜ ಕೊರ್ಲಹಳ್ಳಿ, ಗಂಗಾಧರ ಮೇಲಗಿರಿ, ಶಂಭು ಕಾರಕಟ್ಟಿ, ಶೈಲೇಶ್ ಬಾಗಮಾರ, ಅಮೀನಸಾಬ ಕಾಗದಗಾರ, ಶ್ರೀಧರ ಪಿಳ್ಳಿ, ಶಿದ್ಧಲಿಂಗಪ್ಪ ವಾಲಿಶೆಟ್ಟರ, ಸುಶೀಲಾ ಕೋಟಿ, ಸುರೇಖಾ ಪಿಳ್ಳಿ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಮಹೇಶ ಕೋಟಿ ಸ್ವಾಗತಿಸಿದರು.

ಸಂಸ್ಥಾಪಕ ನಿರ್ದೇಶಕ ಗಂಗಾಧರ ಕೋಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಭು ಕಾರಕಟ್ಟಿ ನಿರೂಪಿಸಿದರು. ಸುಶೀಲಾ ಕೋಟಿ ವಂದಿಸಿದರು.

ಕಾರ್ಯಕ್ರಮದಲ್ಲಿ ಸಿದ್ಧಮಲ್ಲಪ್ಪ ಕಾವೇರಿ, ಜಯರಾಜ ಕೋಟಿ, ಪ್ರಭು ಹಿರೇಮಠ, ಸಿದ್ಧಲಿಂಗಪ್ಪ ಇಟಗಿ, ಧನ್ನೂರಹಿರೇಮಠ, ಶ್ರೀನಿವಾಸ ಹುಬ್ಬಳ್ಳಿ, ಹಾಳಕೇರಿ ಶೆಟ್ರು, ಸಂಧ್ಯಾ ಕೋಟಿ, ನೀಲಾ ಪಿಳ್ಳಿ, ಸುಷ್ಮಾ ಬಣಗಾರ, ರೇಷ್ಮಾ ಪಿಳ್ಳಿ, ಬಸಮ್ಮ ಬಳ್ಳಾರಿ, ರೇಣುಕಾ ಕುರಿ ಮುಂತಾದವರು ಪಾಲ್ಗೊಂಡಿದ್ದರು.

## ಸೋರುತ್ತಿರುವ ವಸತಿ ನಿಲಯ: ದುರಸ್ತಿಗೆ ಮನವಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಗೊಜನೂರು ಗ್ರಾಮದ ಕರ್ನಾಟಕ ಕಸ್ತೂರಬಾ ಬಾಲಕಿಯರ ವಸತಿ ನಿಲಯದ ಕೊಠಡಿಗಳು ಹಾಳಾಗಿದ್ದು, ಅಲ್ಲಿರುವ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ. ಈ ಹಿನ್ನಲೆಯಲ್ಲಿ ಕೊಠಡಿಗಳನ್ನು ದುರಸ್ಥಿ ಮಾಡಿಸಿ, ಹೊಸ ಕಟ್ಟಡ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಗೊಜನೂರ ಗ್ರಾಮ ಘಟಕದ ವತಿಯಿಂದ ಜಿಲ್ಲಾ ಸಂಚಾಲಕ ಚೇತನ ಕಣವಿ ಅವರ ನೇತೃತ್ವದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೋಮವಾರ ಮನವಿ ಅರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಚೇತನ ಕಣವಿ, ಈ ವಸತಿ ನಿಲಯದ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಮಳೆ ನೀರು ಕಟ್ಟಡದ ಒಳಗಡೆ ಸೋರುತ್ತಿರುವುದರಿಂದ ವಿದ್ಯಾರ್ಥಿಗಳು



ಪರದಾಡುವಂತಾಗಿದೆ. ಅನೇಕ ದಿನಗಳಿಂದ ಇಲ್ಲಿನ ಪರಿಸ್ಥಿತಿ ಗೊತ್ತಿದ್ದರೂ ಸಹ ಕ್ರಮ ಕೈಗೊಳ್ಳಲಾಗಿಲ್ಲ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ವಸತಿ ನಿಲಯದ ದುರಸ್ಥಿ ಮಾಡಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಕರವೇ ವತಿಯಿಂದ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದರು. ಬಸವನಗೌಡ ಪಾಟೀಲ, ದಾವಲಸಾಬ ಆನಿ, ಪ್ರವೀಣ ವಡಕಣ್ಣವರ, ಪ್ರದೀಪ, ಮಲ್ಲನಗೌಡ ದೊಡ್ಡಗೌಡ್ರ, ಬಸಪ್ಪ ಹರಿಜನ, ಅಮೃತಗೌಡ ದೊಡ್ಡಗೌಡ್ರ, ಪ್ರಭು ಕೊಂಡಿಕೊಪ್ಪ, ಮುದವನಗೌಡ ದೊಡ್ಡಗೌಡ್ರ, ಶಂಕ್ರಪ್ಪ ಸವಣೂರ ಸೇರಿದಂತೆ ಅನೇಕರಿದ್ದರು.

### ಸಾಮೂಹಿಕ ಶ್ರೀ ಲಲಿತಾ ಸಹಸ್ರಾರ್ಚನೆ, ಗುರುವಂದನಾ ಧರ್ಮ ಸಮಾರಂಭ

# ಭಾರತೀಯ ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರ



ಭೌತಿಕ ಬದುಕಿಗೆ ಭಗವಂತ ಕೊಟ್ಟ ಕೊಡುಗೆ ಅಪಾರ. ಜೀವ ಜಗತ್ತಿಗೆ ಅನ್ನ, ಗಾಳಿ, ನೀರು, ಬೆಳಕು ಇವೆಲ್ಲವುಗಳನ್ನು ಕೊಟ್ಟಿದ್ದನ್ನು ಮರೆಯಲಾಗದು. ಶಿವಶಕ್ತಿಯಿಂದ ನಿರ್ಮಾಣಗೊಂಡ ಈ ಜಗದಲ್ಲಿ ಎಲ್ಲರೂ ಶಿವನನ್ನು ಪೂಜಿಸಿ ಸತ್ಫಲಗಳನ್ನು ಪಡೆದಿದ್ದಾರೆ. ಶಿವಶಕ್ತಿಯಿಂದ ಒಳಗೊಂಡಿರುವುದೇ ವೀರಶೈವ ಧರ್ಮ ಬಾಂಧವರು ಪೂಜಿಸುವ ಇಷ್ಟಲಿಂಗ. ಅನಿಷ್ಠಗಳನ್ನು ಪರಿಹರಿಸಿ ಇಷ್ಟಾರ್ಥ ಕೊಡುವ ಶಕ್ತಿ ಇದಕ್ಕಿದೆ.

– ಡಾ.ವೀರಸೋಮೇಶ್ವರ ಜಗದ್ಗುರುಗಳು.
ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

■ವಿಜಯಸಾಕ್ಷಿ ಸುದ್ದಿ, ತುಮಕೂರು

ಧರ್ಮ ಭೂಮಿಯಾದ ಭಾರತ ದೇಶದಲ್ಲಿ ಸಂಸ್ಕೃತಿಗೆ ಬಹಳಷ್ಟು ಮಹತ್ವ ಕೊಟ್ಟಿದ್ದಾರೆ. ಸಂಸ್ಕಾರದಿಂದ ಮಾನವ ಜೀವನ ಉಜ್ವಲಗೊಳ್ಳಲು ಸಾಧ್ಯ. ಭಾರತೀಯ ಉತ್ಕೃಷ್ಟ ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರವಾದುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ರವಿವಾರ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನಾಗರನವಿಲೆಯ ಶಿವಾನುಗ್ರಹ ಸೇವಾ ಸಂಘದ ಆಶ್ರಯದಲ್ಲಿ ಸಾಮೂಹಿಕ ಶ್ರೀ ಲಲಿತಾ ಸಹಸ್ರಾರ್ಚನೆ ಮತ್ತು ಶ್ರೀ ರಂಭಾಪುರಿ ಜಗದ್ಗುರುಗಳವರ ಗುರುವಂದನಾ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಅಶೀರ್ವಚನ ನೀಡುತ್ತಿದ್ದರು.

ವೀರಶೈವ ಧರ್ಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಸೈದ್ಧಾಂತಿಕ ತತ್ವ-ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಅದೇ ದಾರಿಯಲ್ಲಿ ಶರಣರು ಮುನ್ನಡೆದು ಬಾಳಿಗೆ ಬೆಳಕು ಕಂಡರು. ಗುರು ತತ್ವಕ್ಕೆ ಸಮಾನವಾದ ತತ್ವ ಇನ್ನೊಂದಿಲ್ಲ. ಎಲ್ಲ ಧರ್ಮಗಳಿಗೂ ಗುರು ಮಾರ್ಗದರ್ಶನ ಇದ್ದೇ ಇರುತ್ತದೆ. ಮಹಿಳೆಯರು ಧಾರ್ಮಿಕ ಸಂಸ್ಕೃತಿ ಆಚರಣೆಗಳನ್ನು ಪರಿಪಾಲಿಸಿಕೊಂಡು ಬರಲು ಈ ಕಾರ್ಯಕ್ರಮ ಸ್ಫೂರ್ತಿಯಾಗಿದೆ. ವೈಶಿಷ್ಟ್ಯವಾದ ಸಾರೋಟ ಮೆರವಣಿಗೆಯು ಶ್ರೀ ಸೋಮೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ವೀರಶೈವ ಮಂಟಪದವರೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರನ್ನು ಪೂರ್ಣ ಕುಂಭ ವಾದ್ಯ ವೈಭವಗಳೊಂದಿಗೆ ಬರಮಾಡಿಕೊಂಡಿದ್ದನ್ನು ಎಂದಿಗೂ ಮರೆಯಲು ಸಾಧ್ಯವಾಗುವುದಿಲ್ಲ. ತುಮಕೂರಿಗೂ ಶ್ರೀ ರಂಭಾಪುರಿ ಪೀಠಕ್ಕೂ ಇರುವ ಸಂಬಂಧ ಅವಿನಾಭಾವವಾದುದು. ಸಿದ್ಧೇಶ್ವರ ಶಾಸ್ತ್ರಿಗಳು ಮತ್ತು ಪವನಕುಮಾರ ಸಂಗಡಿಗರು ಮಾಡಿದ ಕಾರ್ಯ ಸ್ತುತ್ಯವಾದುದೆಂದು ಹರುಷ ವ್ಯಕ್ತಪಡಿಸಿದರು. ಇದೇ ಸಮಾರಂಭದಲ್ಲಿ 250 ಪುಟಗಳ 'ಸ್ತೋತ್ರಾಂಜಲಿ' ಕೃತಿ ಸಂಕಲನ ಬಿಡುಗಡೆ ಮಾಡಿದರು.

ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು, ನುಗ್ಗೇಹಳ್ಳಿ ಡಾ.ಮಹೇಶ್ವರ ಶಿವಾಚಾರ್ಯ ಸ್ವಾಮಿಗಳು, ದೊಡ್ಡಗುಣಿ ಹಿರೇಮಠದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮೊದಲ್ಗೊಂಡು ಹತ್ತಾರು ಮಠಾಧೀಶರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಚನ್ನಬಸವಾರಾಧ್ಯರು ಮತ್ತು ಸಿದ್ಧೇಶ್ವರ ಶಾಸ್ತ್ರಿಗಳು ಪೂಜಾ ಕಾರ್ಯ ನೆರವೇರಿಸಿದರು.

ತುಮಕೂರು ಶಾಸಕ ಗಣೇಶ, ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಶೇಖರ, ಸಮಾಜದ ಹಿರಿಯ ಧುರೀಣ ಸಿ ವಿ ಮಹಾದೇವಯ್ಯ, ಬಾಳಯ್ಯ ಇಂಡಿಮಠ ಇನ್ನೂ ಹಲವಾರು ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಶಾಲು ಹೊದಿಸಿ ಫಲ-ಪುಷ್ಪವಿತ್ತು ಶುಭ ಹಾರೈಸಿದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ನಿರೂಪಿಸಿ ಪ್ರಾಸ್ತಾವಿಕ ನುಡಿ ಸಲ್ಲಿಸಿದರು. ಸಮಾರಂಭದ ನಂತರ ಬಂದ ಎಲ್ಲ ಸದ್ಭಕ್ತರಿಗೆ ಪ್ರಸಾದ ವಿನಿಯೋಗ ಜರುಗಿತು.

## ವೀರೇಶ್ವರ ನಗರದಲ್ಲಿ ಗೃಹಲಕ್ಷ್ಮೀ ಯೋಜನೆ ನೋಂದಣಿ ಕಾರ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹಲಕ್ಷ್ಮೀ ಯೋಜನೆಯ ನೋಂದಣಿ ಕಾರ್ಯವು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್ ಕೆ ಪಾಟೀಲರ ಆದೇಶದ ಮೇರೆಗೆ ನಗರದ 33ನೇ ವಾರ್ಡಿನ ವೀರೇಶ್ವರ ನಗರದಲ್ಲಿ ಯಶಸ್ವಿಯಾಗಿ ನೆರವೇರಿತು.

ನಗರಸಭೆಯ ಮಾಜಿ ಸದಸ್ಯ ಎಂ ಸಿ ಶೇಖ ನೇತೃತ್ವದಲ್ಲಿ ಮುಖಂಡರಾದ ಸಮೀರ್ ದಂಡಿನ್ ನೋಂದಣೆಯ ಕಾರ್ಯ ನಡೆಸಿದರು. ವಾರ್ಡಿನ ಬೂತ್ ನಂ.122ರ ಅಧ್ಯಕ್ಷ ಈಶ್ವರ ಲಕ್ಷ್ಮೇಶ್ವರ, ಗುರು-ಹಿರಿಯರು ಹಾಗೂ ಯುವಕರು ಉಪಸ್ಥಿತರಿದ್ದು ನೋಂದಣಿ ಕಾರ್ಯವನ್ನು ಯಶಸ್ವಿಗೊಳಿಸಿದರು.



**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

ಸಿದ್ದೇಶ್ವರ ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಐ ಬಿ ಬೆನಕೊಪ್ಪ ಅಭಿಮತ

# ವಿದ್ಯಾರ್ಥಿಗಳು ದೇಶಕ್ಕೆ ಭದ್ರ ಅಡಿಪಾಯ ಹಾಕಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಈ ದೇಶ ಯುವಶಕ್ತಿಯ ಆಧಾರದ ಮೇಲೆ ನಿಂತಿದ್ದು, ವಿದ್ಯಾರ್ಥಿಗಳು ನಾವು ದೇಶಕ್ಕೆ ಸಲ್ಲಿಸಬಹುದಾದ ಕೊಡುಗೆ ಏನೆಂದು ಸ್ವತಃ ನಿರ್ಧರಿಸಿ, ಅದನ್ನು ಸಲ್ಲಿಸಲು ಸಿದ್ಧರಾಗಬೇಕು ಎಂದು ನಿವೃತ್ತ ಉಪನಿರ್ದೇಶಕ ಐ ಬಿ ಬೆನಕೊಪ್ಪ ನುಡಿದರು.

ಅವರು ನಗರದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ತೋಂಟದ ಸಿದ್ದೇಶ್ವರ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ಪದವಿಪೂರ್ವ ಮಹಾವಿದ್ಯಾಲಯದಲ್ಲಿ 2023–24ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಛಲ ಮತ್ತು ಜ್ಞಾನದ ಹಂಬಲವಿದ್ದಾಗ ಮಾತ್ರ ವಿದ್ಯಾರ್ಥಿಗಳು ಜೀವನ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಉಪನ್ಯಾಸಕರು ಯುವಶಕ್ತಿಯನ್ನು ಪ್ರೇರೇಪಿಸುವ ಕಾರ್ಯ ಮಾಡಬೇಕು. ಶ್ರೇಷ್ಠ ಪರಂಪರೆಯನ್ನು ಹೊಂದಿರುವ ದೇಶ ನಮ್ಮದಾಗಿದ್ದು, ವಿದ್ಯಾರ್ಥಿಗಳು ದೇಶಕ್ಕೆ ಭದ್ರ ಭವಿಷ್ಯದ ಅಡಿಪಾಯ ಹಾಕಬೇಕು. ಸಾಧಕರ, ದೇಶಭಕ್ತರ ಜೀವನ ಚರಿತ್ರೆಗಳಿಂದ ಸ್ಫೂರ್ತಿ ಪಡೆದು ಪಾಲಕರು ಹಾಗೂ ಕಲಿತ ವಿದ್ಯಾಸಂಸ್ಥೆಯು ಹೆಮ್ಮೆ ಪಡುವಂತೆ ಸಾಧನೆ ಮಾಡಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಪ್ರೊ. ಎಸ್ ಎಸ್ ಪಟ್ಟಣಶೆಟ್ಟರ ಲಿಂ.ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಜೀವನ–ಸಾಧನೆಯನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾ, ತೋಂಟದ ಸಿದ್ದೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಫಲಿತಾಂಶ ಹಾಗೂ ಶೈಕ್ಷಣಿಕ ಸಾಧನೆಯನ್ನು ಪ್ರಶಂಸಿಸಿದರು.

ಮುಖ್ಯ ಅಥಿತಿಗಳಾದ ಪಿ ಬಿ ವಸ್ತ್ರದ ವಿದ್ಯಾರ್ಥಿಗಳಿಗೆ ಕಾಲೇಜು ಸಂಸತ್ತಿನ ಪ್ರಮಾಣ ವಚನ ಬೋಧಿಸಿ ಮಾತನಾಡಿ, ಮಹಾವಿದ್ಯಾಲಯದ ಸಂಸತ್ತು ಸಂವಿಧಾನ ಮಾದರಿಯಲ್ಲಿಯೇ ರಚನೆಗೊಂಡಿದ್ದು, ಎಲ್ಲ ವಿದ್ಯಾರ್ಥಿಗಳು ಉಪನ್ಯಾಸಕರ ಮಾರ್ಗದರ್ಶನವನ್ನು ಅನುಸರಿಸುವಂತೆ ತಿಳಿಸಿದರು.

ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ಅಮರೇಶ ಅಂಗಡಿ, ನಿವೃತ್ತ ಉಪನ್ಯಾಸಕ ಎಚ್ ಎಸ್ ಕಿಂದ್ರಿ, ವಿದ್ಯಾರ್ಥಿ ಪ್ರತಿನಿಧಿ ಚೇತನ ಬದಾಮಿ ವೇದಿಕೆ ಮೇಲಿದ್ದರು.

ಸುಮಾ ಗುರಿಕಾರ ಸಂಗಡಿಗರು ಪ್ರಾರ್ಥಿಸಿದರು. ಪ್ರಾಚಾರ್ಯ ಕೆ ಡಿ ಮೆಣಸಿನಕಾಯಿ ಪ್ರಾಸ್ತವಿಕವಾಗಿ ಮಾತನಾಡಿದರು. ಉಪ ಪ್ರಾಚಾರ್ಯ ವಾಯ್ ಎಸ್ ಮತ್ತೂರ ಸ್ವಾಗತಿಸಿದರು. ಉಪನ್ಯಾಸಕರಾದ ರೇಷ್ಮಾ ಎಚ್ ವಂದಿಸಿದರೆ, ಎನ್ ವಿ ಕಡಗದ ನಿರೂಪಿಸಿದರು. ಸಭಾ ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



### ತೋಂಟದ ಸಿದ್ಧಲಿಂಗ ಶ್ರೀ ಪ್ರತಿಭಾ ಪುರಸ್ಕಾರ

ಮಾರ್ಚ್–2023ರಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಾಣಿಜ್ಯ ವಿಭಾಗದ ಅರ್ಪಿತಾ ಕರಿಯಪ್ಪನವರ, ತರುನಮ್ ಅಣ್ಣಿಗೇರಿ ಹಾಗೂ ವಿಜ್ಞಾನ ವಿಭಾಗದ ಜ್ಯೋತಿ ಸೂಡಿ, ಮಾಬೂಬಿ ಮುಲ್ಲಾ ಮತ್ತು ಸಾನಿಯಾ ಚಿತ್ರಗಾರ ಅವರಿಗೆ ತೋಂಟದ ಸಿದ್ಧಲಿಂಗ ಶ್ರೀ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ನೀಡಿದ ಉಪನ್ಯಾಸಕರನ್ನು ಸಹ ಗೌರವಿಸಿ ಸತ್ಕರಿಸಲಾಯಿತು.

## ಸಮಾಜ ಬಾಂಧವರನ್ನು ಮುಖ್ಯವಾಹಿನಿಗೆ ತರಲು ಕ್ರಮವಹಿಸಿ

▸▸ಮೊದಲನೇ ಪುಟದಿಂದ

ಮೋತಿಲಾಲಸಾ ಪೂಜಾರಿ, ವಿಷ್ಣುಸಾ ಶಿದ್ಲಿಂಗ, ವಿಶ್ವನಾಥ ಖಟವಟೆ, ಮಾರುತಿ ಪವಾರ, ಶ್ರೀನಿವಾಸ ಬಾಂಡಗೆ, ಗಂಗಾಧರ ಹಬೀಬ, ಪರಶುರಾಮ ಬದಿ, ಅಂಬಾಸಾ ಖಟವಟೆ, ವಿನೋಧ ಬಾಂಡಗೆ, ಗಣಪತಿ ಜಿತೂರಿ, ಪ್ರಕಾಶ ಬಾಕಳೆ, ಅನಿಲ್ ಖಟವಟೆ, ಹಿರಿಯರಾದ ಬುಡ್ಡಣ್ಣ ಹಬೀಬ, ಡಾ. ಆರ್ ಎಚ್ ಕಬಾಡಿ, ವಿಠ್ಠಲ್ ಬಾಂಡಗೆ, ಜಗನ್ನಾಥಸಾ ಬಾಂಡಗೆ, ರಾಮಣ್ಣ ಬಾಕಳೆ, ತರುಣ ಸಂಘದ ಅಧ್ಯಕ್ಷ ವಿಶ್ವನಾಥ ಸೋಳಂಕಿ, ಉಪಾಧ್ಯಕ್ಷ ಮಾಧು ಬದಿ, ಗೌರವ ಕಾರ್ಯದರ್ಶಿ ನಾಗರಾಜ ಖೋಡೆ, ಸಹಕಾರ್ಯದರ್ಶಿ ಶ್ರೀಕಾಂತ ಬಾಕಳೆ, ಖಜಾಂಚಿ ಶ್ರೀನಿವಾಸ ಬಾಂಡಗೆ, ಮಹಿಳಾ ಮಂಡಳದ ಅಧ್ಯಕ್ಷೆ ರೇಖಾ ಖಟವಟೆ, ಶಾಂತಾ ಬಾಕಳೆ, ಕಸ್ತೂರಿಬಾಯಿ ಬಾಂಡಗೆ, ಭಾರತಿಬಾಯಿ ಟಿಕಣದಾರ, ಮೋಹನ ಪವಾರ, ಅಂಬಾಲಾಲ ಖೋಡೆ, ಶ್ರೀಕಾಂತ ಅರಸಿದ್ದಿ, ವಿಠ್ಠಲಸಾ ಶಿದ್ಲಿಂಗ, ನಾಗರಾಜ ಪವಾರ, ರಾಮಚಂದ್ರ ಶಿದ್ಲಿಂಗ, ಜಗದೀಶ ಪವಾರ, ಪ್ರವೀಣ ಜಿತೂರಿ ಸೇರಿದಂತೆ ಸಮಾಜ ಬಾಂಧವರು ಉಪಸ್ಥಿತರಿದ್ದರು.

## ವ್ಯಸನ ಮುಕ್ತತೆಗಾಗಿ ವೈದ್ಯರ ಸಲಹೆ ಪಡೆಯಿರಿ

▸▸ಮೊದಲನೇ ಪುಟದಿಂದ

ಆಚರಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದೆ ಎಂದರು.

ಧೂಮಪಾನ ಮಾಡುವುದರಿಂದ ವ್ಯಕ್ತಿಯ ಸುತ್ತಮುತ್ತಲಿನವರಿಗೂ ಸಹ ದೈಹಿಕ ದುಷ್ಪರಿಣಾಮ ಉಂಟಾಗುತ್ತದೆ. ಪಾಲಕರು ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದರೆ ಮಕ್ಕಳೂ ಸಹ ವ್ಯಸನಕ್ಕೆ ಒಳಗಾಗುವ ಸಾಧ್ಯತೆಗಳಿರುತ್ತವೆ ಹಾಗೂ ವ್ಯಕ್ತಿಗಳು ಹಲವಾರು ತಪ್ಪು ತಿಳುವಳಿಕೆಯಿಂದ ಮಾದಕ ವಸ್ತುಗಳ ವ್ಯಸನಿಗಳಾಗುತ್ತಾರೆ. ಮಾದಕ ವ್ಯಸನಿಗಳು ವೈದ್ಯರ ಸಲಹೆಯೊಂದಿಗೆ ಸೂಕ್ತ ಚಿಕಿತ್ಸೆ ಪಡೆದರೆ ವ್ಯಸನತೆಯಿಂದ ಹೊರಬರಬಹುದಾಗಿದೆ. ಭಾರತ ಸರ್ಕಾರದ ಟೆಲಿಮಾನಸ ಕಾರ್ಯಕ್ರಮದಲ್ಲಿ ಆನ್‌ಲೈನ್ ಮುಖಾಂತರ ಭಾಗವಹಿಸಿ ವ್ಯಸನ ಮುಕ್ತತೆಗಾಗಿ ವೈದ್ಯರ ಸಲಹೆಗಳನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಗದೀಶ ನುಚ್ಚಿನ್, ಆರ್‌ಸಿಎಚ್ ಅಧಿಕಾರಿ ಡಾ. ಬಿ ಎಂ ಗೋಜನೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಪ್ರಾದೇಶಿಕ ಸಾರಿಗೆ ಅಧಿಕಾರಿ ಮಂಜುನಾಥ ಶಿರಾಳಿ, ಡಿಡಿಪಿಐ ಜಿ ಎಲ್ ಬಾರಾಟಕ್ಕೆ, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಹುಲಗಣ್ಣವರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿವಾನಂದ ಗಿಡ್ನಂದಿ ಕಾರ್ಯಕ್ರಮ ನಿರೂಪಿಸಿದರು.

ದೇಶದಲ್ಲಿ 26 ಕೋಟಿ ಜನ ತಂಬಾಕು ಸೇವನೆ ಮಾಡುತ್ತಿದ್ದಾರೆ. 16 ಕೋಟಿ ಜನ ಮದ್ಯವ್ಯಸನಿಯಾಗಿದ್ದಾರೆ. 3 ಕೋಟಿ ಜನ ಗಾಂಜಾ ಉಪಯೋಗಿಸುತ್ತಿದ್ದಾರೆ. 51 ಲಕ್ಷ ಜನರು ಮಾದಕ ದ್ರವ್ಯ ಉಪಯೋಗಿಸುತ್ತಿದ್ದಾರೆ. ಆ ಪೈಕಿ 26 ಲಕ್ಷ ಜನ ಮಕ್ಕಳು ವ್ಯಸನಕ್ಕೆ ಒಳಗಾಗಿದ್ದಾರೆ. ತಂಬಾಕು ಸೇವನೆಯಿಂದ ಶೇ.90ರಷ್ಟು ಕ್ಯಾನ್ಸರ್ ಬರುವ ಸಂಭವವಿರುತ್ತದೆ. ವ್ಯಸನಿಗಳ ಚಿಕಿತ್ಸೆಗಾಗಿ ಪ್ರತಿ ವರ್ಷ ದೇಶದಲ್ಲಿ 2 ಸಾವಿರ ಬಿಲಿಯನ್‌ನಷ್ಟು ಖರ್ಚು ಮಾಡಲಾಗುತ್ತಿದೆ. ವಿಶ್ವದಲ್ಲಿನ ಮಾದಕ ವಸ್ತುಗಳ ವ್ಯಸನಿಗಳ ಪೈಕಿ ಶೇ.17ರಷ್ಟು ಭಾರತದಲ್ಲಿದ್ದಾರೆ.

ಮುಂಬೈನ ಅಂಧೇರಿ ಕರ್ನಾಟಕ ಸಂಘಕ್ಕೆ ಅವ್ವ ಸೇವಾ ಟ್ರಸ್ಟ್‌ನಿಂದ 5 ಲಕ್ಷ ರೂ ದತ್ತಿನಿಧಿ

# ಕನ್ನಡ ಸೇವೆಯಲ್ಲಿ ತೊಡಗಿದ್ದು ಖುಷಿ ನೀಡಿದೆ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹೊರನಾಡಿನಲ್ಲಿ ಕನ್ನಡಿಗರು ಉದ್ಯೋಗಕ್ಕಾಗಿ, ಆಶ್ರಯಕ್ಕಾಗಿ ಹಾಗೂ ಬೇರೆ ಬೇರೆ ಕಾರಣಗಳಿಂದ ನೆಲೆಸಿದರೂ ಅಲ್ಲಿನ ಭಾಷೆಯನ್ನು ಗೌರವಿಸುವುದು ಅನಿವಾರ್ಯ. ಆದರೆ ಮಾತೃ ಭಾಷೆಯನ್ನು ಹೃದಯದಲ್ಲಿಟ್ಟು ಪೂಜಿಸುತ್ತಿರುವ, ಪ್ರೀತಿಸುತ್ತಿರುವ ಮುಂಬೈನ ಕನ್ನಡಿಗರ ಕನ್ನಡಾಭಿಮಾನವನ್ನು ಅಭಿನಂದಿಸುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರ, ಮುಂಬೈನ ವಿವಿಧ ಕನ್ನಡಪರ ಸಂಘ–ಸಂಸ್ಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ಭಾರತ ಸ್ವಾತಂತ್ರ್ಯ ಮಹೋತ್ಸವ ಅಮೃತ ಮಹೋತ್ಸವ ಅಂಗವಾಗಿ ಮುಂಬೈನಲ್ಲಿ ಏರ್ಪಡಿಸಿದ 'ಹೊರನಾಡ ಕನ್ನಡ ಸಂಸ್ಕೃತಿ–ಸಂಭ್ರಮ' ಕಾರ್ಯಕ್ರಮ ಉದ್ಘಾಟಿಸಿದ ಅವರು, ಉದ್ಯೋಗಕ್ಕಾಗಿ ಮುಂಬೈನಲ್ಲಿ ನೆಲೆಸಿದ ಕನ್ನಡಿಗರು ತಮ್ಮ ಹತ್ತಾರು ಕಾರ್ಯಗಳ ಒತ್ತಡದ ಮಧ್ಯೆಯೂ ಪ್ರತಿವರ್ಷ ವಿವಿಧ ಕನ್ನಡ ಪರ, ಕನ್ನಡಿಗರ ಪರ, ಕನ್ನಡಿಗ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಸೇವಾ ಕೈಂಕರ್ಯದಲ್ಲಿ ತೊಡಗಿದ್ದು ಖುಷಿ ತಂದಿದೆ ಎಂದರು. ಹೊರನಾಡ ಸಾಹಿತಿಗಳಿಗಾಗಿ ಪ್ರತಿವರ್ಷ ಸಾಹಿತ್ಯಗೋಷ್ಠಿ, ಕವಿಗೋಷ್ಠಿಗಳನ್ನು ಕೂಡಾ ಹಮ್ಮಿಕೊಂಡಿದ್ದು, ಅವರಿಗೆ ಪ್ರೋತ್ಸಾಹಕ್ಕಾಗಿ ಸಾಹಿತಿಗಳಿಗೆ (ಮಹಿಳೆ ಹಾಗೂ ಓರ್ವ ಪುರುಷರಿಗೆ) ಪ್ರತಿವರ್ಷ ದತ್ತಿನಿಧಿ ನೀಡಿ ಸಹಕರಿಸುವುದರ ಜೊತೆಗೆ ಆರ್ಥಿಕವಾಗಿ ಅಸಹಾಯಕರಾದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು, ಇವರ ಸಾಮಾಜಿಕ ಕಳಕಳಿ ಇತರರಿಗೆ ಮಾದರಿ. ಇಲ್ಲಿನ ಕನ್ನಡಪರ ಸಂಘಟನೆಗಳ ಸೇವಾ ಕೈಂಕರ್ಯಕ್ಕೆ ನಮ್ಮ ಅವ್ವ ಸೇವಾ ಟ್ರಸ್ಟ್ ಕೂಡಾ ಕೈಜೋಡಿಸುತ್ತಿದೆ. ಅದಕ್ಕಾಗಿ, ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ 5 ಲಕ್ಷ ರೂ.ಗಳ ದತ್ತಿನಿಧಿಯನ್ನು ನೀಡುವುದಾಗಿ ಹೊರಟ್ಟಿಯವರು ಹೇಳಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ್ ತಂಗಡಗಿ, ಗ್ರಂಥಾಲಯ ಇಲಾಖೆಯ ನಿರ್ದೇಶಕ ಹೊಸಮನಿ ಬಸವರಾಜ, ಹೊರಟ್ಟಿ ಅವರ ಹಿತೈಷಿ ಬಳಗದ ನವೀನ ಗೌಡ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಕನ್ನಡಾಭಿಮಾನಿಗಳು, ಅಧಿಕಾರಿಗಳು, ಕರ್ನಾಟಕ ಸಂಘ ಅಂಧೇರಿ ಅಧ್ಯಕ್ಷ ಭಾಸ್ಕರ ಸುವರ್ಣ ಸಸಿಇದ್ಲು, ಉದಯ ಕೇರಗಲ್ಲ, ಜಗಜೀವನ ಪೂಜಾರಾಯ್, ಸತೀಶ ಕಲಕೇರಾ, ರವೀಂದ್ರ ಶೆಟ್ಟಿ, ದಿನೇಶ ಆರ್ ಕೆ ಮುಂತಾದವರು ಉಪಸ್ಥಿತರಿದ್ದರು.



ಇಲ್ಲಿನ ಕರ್ನಾಟಕ ಸಂಘ ಅಂಧೇರಿಯ ಪದಾಧಿಕಾರಿಗಳು ಕಳೆದ 17 ವರ್ಷಗಳಿಂದ ಮುಂಬೈ ಹಾಗೂ ಮಹಾರಾಷ್ಟ್ರದ ಇತರೆ ಪ್ರದೇಶಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತ ಬಡ ವಿದ್ಯಾರ್ಥಿಗಳಿಗೆ, ಬಡತನ ರೇಖೆಗಳಿಗಿಂತ ಕೆಳಗೆ ಜೀವಿಸುತ್ತಿರುವ 110 ವಿಧವೆಯರಿಗೆ ಸತತವಾಗಿ 10 ವರ್ಷಗಳನ್ನು ಮಾಶಾಸನವನ್ನು ನೀಡುವುದರೊಂದಿಗೆ ಅವರಿಗೆ ವೈದ್ಯಕೀಯ ಪ್ರೋತ್ಸಾಹವನ್ನು ಕೂಡಾ ನೀಡುತ್ತಾ ಬಂದಿದ್ದು ಇತರೆ ಸಂಘಟನೆಗೆ ಮಾದರಿ.

**– ಬಸವರಾಜ ಹೊರಟ್ಟಿ.**

## ಮೊಬೈಲ್ ಬಳಕೆಯ ಬಗ್ಗೆ ಎಚ್ಚರವಹಿಸಿ

▸▸ಮೊದಲನೇ ಪುಟದಿಂದ

ಇಂದು ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ವಿದ್ಯಾರ್ಥಿಗಳು ಈ ರೀತಿಯ ಅಪರಾಧಕ್ಕೆ ಒಳಗಾಗದಂತೆ ಎಚ್ಚರವಹಿಸಬೇಕಿದೆ. ಮೊಬೈಲ್ ಬಳಕೆ ಕಡಿಮೆಯಾಗಬೇಕು. ಅದರಿಂದಾಗುವ ಹಾನಿ, ಲಾಭಗಳ ಬಗ್ಗೆ ಪಾಲಕರು, ಶಿಕ್ಷಕರು ಮಕ್ಕಳಿಗೆ ತಿಳಿಸುವಂತೆ ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ ಟಿ ಗುಡಿಸಾಗರ ಮಾತನಾಡಿ, ವಿದ್ಯಾರ್ಥಿಗಳಿಗೆ ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಅನುಗುಣವಾಗಿ ತಂತ್ರಜ್ಞಾನ ಆಧಾರಿತ ಶಿಕ್ಷಣ ಬೋಧಿಸಬೇಕಿದೆ. ನೈತಿಕ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸಿ, ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸಬೇಕಿದೆ. ಸದೃಢ ಆರೋಗ್ಯದೊಂದಿಗೆ ಸದೃಢ ಮನಸ್ಸು ಹೊಂದಲು ಯೋಗ, ಧ್ಯಾನವನ್ನು ನಿರಂತರ ಮಾಡಬೇಕು. ಸಂಸ್ಕೃತಿ, ಸಂಸ್ಕಾರವನ್ನು ಅಳವಡಿಸಿಕೊಳ್ಳಬೇಕು. ಯಶಸ್ಸು ದೊರೆಯಲು ನಿರಂತರ ಪ್ರಯತ್ನ, ಸತ್ಯದೊಂದಿಗೆ ನಮ್ಮನ್ನು ನಾವು ಅರ್ಪಿಸಿಕೊಳ್ಳಬೇಕು. ಕಲಿಸಿದ ಸಂಸ್ಥೆಗೆ, ಕಲಿಸಿದ ಗುರುಗಳಿಗೆ ಹಾಗೂ ತಂದೆ–ತಾಯಿಗಳಿಗೆ ಗೌರವ ತಂದು ಉತ್ತಮ ವ್ಯಕ್ತಿಗಳಾಗಿ ರೂಪಿತಗೊಳ್ಳಬೇಕೆಂದು ಹೇಳಿದರು.

ಈ ಸಾಲಿನ ವಿದ್ಯಾರ್ಥಿ ಸಂಸತ್‌ನ ಸದಸ್ಯರಿಗೆ ಹಿರಿಯ ನಿರ್ದೇಶಕ ಜಿ ಬಿ ಕುಲಕರ್ಣಿ ಪ್ರಮಾಣ ವಚನ ಬೋಧಿಸಿದರು. ಸಮಾರಂಭದಲ್ಲಿ ನಿರ್ದೇಶಕ, ನಿವೃತ್ತ ಪ್ರಾಚಾರ್ಯ ಸಿ ಎಸ್ ಸಾಲೂಟಗಿಮಠ, ವಿದ್ಯಾರ್ಥಿ ಪ್ರತಿನಿಧಿಗಳು, ಬೋಧಕ/ಬೋಧಕೇತರ ಸಿಬ್ಬಂದಿಗಳು ಇದ್ದರು. ವಿದ್ಯಾರ್ಥಿಗಳಿಂದ ಸಮೂಹ ನೃತ್ಯ ಪ್ರದರ್ಶನ ನಡೆಯಿತು.

ಶ್ವೇತಾ ಬೂಸಪ್ಪನವರ, ಭವಾನಿ ಹಣಗಿ ಪ್ರಾರ್ಥಿಸಿದರು. ಮುಖ್ಯೋಪಾಧ್ಯಾಯ ಜಿ ಬಿ ಹಿರೇಮಠ ಸ್ವಾಗತಿಸಿದರು. ಶ್ರದ್ಧಾ ಮುಧೋಳೆ, ದಾನೇಶ್ವರಿ ರಾವತ್ ನಿರೂಪಿಸಿದರು. ಪ್ರಧಾನಮಂತ್ರಿ ನವ್ಯ ಬನಹಟ್ಟಿ ವಂದಿಸಿದರು.

ವಿದ್ಯಾರ್ಥಿಗಳಲ್ಲಿ ಇರುವ ಪ್ರತಿಭೆ, ಗುರಿಗೆ ನಿರಂತರ ಮಾರ್ಗದಶನ ನೀಡಿದರೆ ಅವರ ಜೀವನದಲ್ಲಿ ಯಶಸ್ಸು ಹೊಂದಲು ಸಾಧ್ಯ. ಇಂದಿನ ಜಗತ್ತಿಗೆ ಉತ್ತಮ ನಾಗರಿಕರಾಗಲು ಒಳ್ಳೆಯ ಗುಣಗಳು, ಶೈಕ್ಷಣಿಕ ಮೌಲ್ಯಗಳ ಅಗತ್ಯವಿದೆ. ಅವುಗಳನ್ನು ಬೋಧಿಸಲು ಶಿಕ್ಷಕರು ಮುಂದಾಗಬೇಕು. ಗುರುಗಳಿಗೆ, ತಂದೆ ತಾಯಿಗಳಿಗೆ ಗೌರವ ನೀಡಬೇಕು.

**– ಮಲ್ಲಯ್ಯ ಮಠಪತಿ.**
ಸಿಪಿಐ, ನರಗುಂದ.


**GADAG-BETAGERI URBAN DEVELOPMENT AUTHORITY**
No.GBUDA/BLY/ENGG/456-459/2023-24 DATE:01/08/2023

**CALL FOR QUOTATION'S**

Sub : Providing and supplying of EV and Non-EV Push Carts for Gadag Betageri Urban Development Authority.

Lowest rates for the Providing and Supplying of EV and Non EV Push Carts for Gadag-Betageri Urban Development Authority, GADAG-BETAGERI Interested agencies may be quote their rates on or before **04/08/2023** at 11.00 Am the detailed are as below:

| Sl. No. | Description of item | Unit | Qty |
|---|---|---|---|
| 01 | Supplying of EV and Non-EV Push Carts. Specification: - A Manual push cart having 6" feet in length,3.6" feet in Width and Height of 6" feet. A push cart should have 4wheels with solid rubber, rimmed tire and having wheel Dia of 24 inches. The body of Cart should be made of mild steel and having the capacity of 200kg. The push cart should be provided with roof and storage cabin of 80 liter. The cart should be painted in 2 coats of Enamel Paint and finished with cash box, Speaker, 16 compartment tray, 1 Light & 12V Battery | No | 01 |

**Sd/- Commissioner., Gadag-Betageri Urban Development Authority, Gadag-Betageri**
DIPR/Gadag/KSMCA/93/2023-24


## ಸ್ವಯಂಪ್ರೇರಣೆಯಿಂದ ಬಿ.ಎಲ್.ಓ. ಕಾರ್ಯನಿರ್ವಹಣೆ ಪ್ರಶಂಸನೀಯ

▸▸ಮೊದಲನೇ ಪುಟದಿಂದ

ಶಾಲಾ ಶಿಕ್ಷಕರನ್ನು ಬಿ.ಎಲ್.ಓ.ಗಳಾಗಿ ನಿಯೋಜಿಸಲಾಗುತ್ತಿದೆ. ಬಿ.ಎಲ್.ಓ.ಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವದರ ಮೂಲಕ ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗುವಂತೆ ಜಿಲ್ಲಾಧಿಕಾರಿಗಳು ಕರೆ ನೀಡಿದರು. ಈ ಸಂದರ್ಭದಲ್ಲಿ ಹೊಸದಾಗಿ ಬಿ.ಎಲ್.ಓ.ಗಳಾಗಿ ನೇಮಕಗೊಂಡ ಶಿಕ್ಷಕರು ಹಾಜರಿದ್ದರು.


**ಕರ್ನಾಟಕ ಸರಕಾರ**

**ಆಯುಕ್ತರು, ಭೂಸ್ವಾಧೀನ, ಪುನರ್ ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟೆ–587103**

**ನಮೂನೆ–VII**

[ಕರ್ನಾಟಕ ತಿದ್ದುಪಡಿ ನಿಯಮ–6]

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರನಿರ್ಮಾಣ ಕಾಯ್ದೆ–2013ರ ಕಲಂ–19(1) ಮೇರೆಗೆ ಅಧಿಸೂಚನೆ.**

ಸಂಖ್ಯೆ: ಕಂ.ಇ.ಭೂಸಾ–2ಬಿ/ಸಿಆರ್–805/ 2021–22 ದಿನಾಂಕ:08/12/2022

ಸಾರ್ವಜನಿಕ ಉದ್ದೇಶದ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಅಡಿಯಲ್ಲಿ ಕೊಪ್ಪಳ ಏತ ನೀರಾವರಿ ಯೋಜನೆಯ ಹುಲಗೇರಿ ಬ್ರಾಂಚಿನ ಹನಿ ನೀರಾವರಿ ಮತ್ತು ಕೆರೆ ತುಂಬುವ ಯೋಜನೆಯ ರೈಸಿಂಗ್ ಮೈನ್ (ಏರು ಕೊಳವೆ) ಕಾಮಗಾರಿಯ **ಕಿ.ಮೀ. 39.303 ರಿಂದ 39.558** ಕಿಮೀವರೆಗೆ ನಿರ್ಮಾಣಕ್ಕಾಗಿ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ **ರುದ್ರಾಪೂರ** ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಕಂಡುಬಂದಿದ್ದರಿಂದ ಹಾಗೂ ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರನಿರ್ಮಾಣ ಕಾಯ್ದೆ–2013 (2013**ರ ಕೇಂದ್ರ ಅಧಿನಿಯಮ ಸಂಖ್ಯೆ:30)ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23–07–2019 ರಿಂದ ಜಾರಿಗೆ ಬಂದಿರುವ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019 (2019**ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ–10(ಎ)ರಡಿ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸಂಖ್ಯೆ:16/2019 ದಿನಾಂಕ:16–072019 ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಿದ್ದು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ, ದಿನಾಂಕ:23–07–2019 ರಂದು ಪ್ರಕಟಗೊಂಡಿದ್ದರ ಮೇರೆಗೆ 2013ರ ಮೂಲ ಕಾಯ್ದೆಯ ಕಲಂ–II(1) ರಡಿ ಕ್ರಮಾಂಕ ವಿಜಿಬಾ/ಭೂಸ್ವಾ/ಸಿಆರ್–99/2020–21 ದಿನಾಂಕ:24–11–2020 ರಂದು ಅನುಮೋದನೆಗೊಂಡು ದಿನಾಂಕ:26–11–2020 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದಂತೆ ಕಲಂ–15(1) ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ ವರದಿಯನ್ನು ಸರ್ಕಾರದ ಪತ್ರ ಸಂಖ್ಯೆ:ಕಂ.ಇ./ಭೂಸ್ವಾ–2ಬಿ/ಸಿಆರ್–805/2021–22/2317 ದಿನಾಂಕ:14–02–2022 ರಲ್ಲಿ ಒಪ್ಪಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ದೇಶನ ನೀಡಲಾಗಿದೆ.

ಸದರಿ ಅಧಿನಿಯಮ ಕಲಂ 18 ರನ್ವಯ ಪುನರ್‌ವಸತಿ ಹಾಗೂ ಪುನರ್ ನಿರ್ಮಾಣ ಸಾರಾಂಶದ ಅನುಮೋದಿತ ಕರಡು ಯಾದಿಯನ್ನು ಕಲಂ 19(2)ರನ್ವಯ ಘೋಷಿಸಲಾಗಿದೆ.

**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರನಿರ್ಮಾಣ ಕಾಯ್ದೆ–2013**ರ ಕಲಂ–19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆಯಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿರುವ ಉದ್ದೇಶಕ್ಕೆ ಜಮೀನುಗಳು ಅಗತ್ಯವಾಗಿವೆಯಂದು ಸದರಿ ಅಧಿನಿಯಮದ 19(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣದ (ಜಿ) ಖಂಡದ ಮೇರೆಗೆ ಹೆಚ್ಚುವರಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ನಂ.01, ಕೃ.ಮೇ.ಯೋ., ಬಾಗಲಕೋಟೆ ಇವರನ್ನು ಸದರಿ ಜಮೀನುಗಳ ಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂ.ಇ.04ಎಕ್ಯೂಬಿ.2020 ದಿನಾಂಕ:28–03–2022 ರನ್ವಯ ಸದರಿ ಯೋಜನೆಗೆ 2013ರ ಮೂಲ ಕಾಯ್ದೆಯ ಅಧ್ಯಾಯ–II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ 2013ರ ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಪುನರ್ವಸತಿ ಮತ್ತು ಪುನರನಿರ್ಮಾಣದ ಅವಕಾಶಗಳ ಬದಲಾಗಿ ನೀಡಲಾಗುವ ಒಂದು ಇಡಿಗಂಟು ಮೊತ್ತವನ್ನು **'ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು ಕಾಯ್ದೆ–2020ರ ನಿಯಮ 29(5)** ರಂತೆ ನಿಗಧಿಪಡಿಸಲು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದರಿ ಆಧನಿಯಮದ ಕಲಂ–21(1) ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆಯ ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ, ಕಲಂ 19[7] ರಡಿಯಲ್ಲಿ ಮಾನ್ಯ ಆಯುಕ್ತರು, ಭೂಸ್ವಾಧೀನ ಕೃ.ಮೇ.ಯೋ., ನವನಗರ, ಬಾಗಲಕೋಟೆರವರು ದಿನಾಂಕ:31–12–2022 ರವರೆಗೆ ಅವಧಿ ವಿಸ್ತರಣೆ ಆದೇಶ ಪಡೆಯಲಾಗಿದೆ.

| ಕ್ರ.ಸಂ. | ವಿವರಣೆ | ಕ್ಷೇತ್ರ (ಎ–ಗುಂ)/ ಕುಟುಂಬಗಳ ಸಂಖ್ಯೆ |
|---|---|---|
| 1 | ಒಟ್ಟು ಭೂಸ್ವಾಧೀನಗೊಳ್ಳುವ ಕ್ಷೇತ್ರ | 02–25 |
| 2 | ಪ್ರಸ್ತುತ ಕಲಂ 19 (1)ರ ಅಧಿಸೂಚನೆಯಲ್ಲಿ ಅಳವಡಿಸಿದ ಕ್ಷೇತ್ರ | 02–22 |
| 3 | ಒಟ್ಟು ಬಾಧಿತ ಕುಟುಂಬಗಳು | 09 |
| 4 | ಬಹುಪಾಲು ಜಮೀನು ಕಳೆದುಕೊಳ್ಳುತ್ತಿರುವ ಕುಟುಂಬಗಳ ಸಂಖ್ಯೆ | SC-01 ST-00 |
| 5 | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪಟ್ಟಿ | – |
| 6 | ಉದ್ಯೋಗಾಕಾಂಕ್ಷಿಗಳ ಪಟ್ಟಿ | – |

ಸದರ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ಸೂಚಿಸುವ ಒಂದು ನಕ್ಷೆಯನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಹಾಗೂ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಅವಗಾಹನೆಗಾಗಿ ಹೆಚ್ಚುವರಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ನಂ.01, ಕೃ.ಮೇ. ಯೋ., ಬಾಗಲಕೋಟೆ ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

(ಸಂ.ಎಲ್ಎಕ್ಯೂ:/ಎಸ್‌ಆರ್–94/2020–21)

**ಅನುಸೂಚಿ**

ಗ್ರಾಮ : ರುದ್ರಾಪೂರ ಹೋಬಳಿ : ನರೇಗಲ್ಲ ತಾಲ್ಲೂಕ: ಗಜೇಂದ್ರಗಡ ಜಿಲ್ಲಾ: ಗದಗ

| ಕ್ರ. ಸಂ | ಖಾತೆದಾರರ/ ಹೆಸರು / ಭೂಮಾಲೀಕರು/ ಭೂಹಿಡುವಳಿದಾರರ ಹೆಸರು | ಸರ್ವೆ/ ಖಾತಾ ನಂ. | ಹಿಸ್ಸಾ ನಂ. | ತರಹೆ | ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ / ಕೃಷಿ |
|---|---|---|---|---|---|
| 1 | 2 | 3 | 4 | 5 | 6 |
| 1 | ಲಮಾಣಿ ಅಡಿವೆಪ್ಪ ತಂದೆ ದೀಪಲೆಪ್ಪ, ಪಡಿಯಪ್ಪ ತಂದೆ ದೀಪಲೆಪ್ಪ, ಉಮೇಶ ತಂದೆ ದೀಪ ಪರಸಪ್ಪ ತಂದೆ ದೀಪಲೆಪ್ಪ ಸಕ್ರಪ್ಪ ತಂದೆ ದೀಪಲೆಪ್ಪ ಮುತ್ತಪ್ಪ ತಂದೆ ದೀಪಲೆಪ್ಪ, ದೇಶಪ್ಪ ತಂದೆ ದೀಪಲೆಪ್ಪ ಹನಮಂತಪ್ಪ ತಂದೆ ದೀಪಲೆಪ್ಪ | 14 | 1 | ಖುಷ್ಕಿ | 0–28 |
| 2 | ಗಡಗಿ ರಾಮಪ್ಪ ತಂದೆ ನೀಲಪ್ಪ | 14 | 2 | ಖುಷ್ಕಿ | 0–01 |
| 3 | ಗಡಗಿ ಬಸಪ್ಪ ಉರ್ಫ ಬಸವರಾಜ ತಂದೆ ಕುಬೇರಪ್ಪ | 14 | 3 | ಖುಷ್ಕಿ | 0–11 |
| 4 | ಗಡಗಿ ಪರಶುರಾಮ ತಂದೆ ಕುಬೇರಪ್ಪ | 14 | 4 | ಖುಷ್ಕಿ | 0–12 |
| 5 | ಗಡಗಿ ಮಂಜುನಾಥ ತಂದೆ ಕುಬೇರಪ್ಪ | 14 | 5 | ಖುಷ್ಕಿ | 0–04 |
| 6 | ಹಿರೇಮಠ ಈರಯ್ಯ ತಂದೆ ಶೇಖರಯ್ಯ | 11 | 2 | ಖುಷ್ಕಿ | 0–05 |
| 7 | ಕರಿ ದ್ಯಾಮಪ್ಪ ತಂದೆ ಬಸಪ್ಪ | 12 | 1 | ಖುಷ್ಕಿ | 0–19 |
| 8 | ಹೊಸಳ್ಳಿ ಬಸಪ್ಪ ತಂದೆ ಬಸಪ್ಪ | 10 | 4 | ಖುಷ್ಕಿ | 0–21 |
| 9 | ನಾಯ್ಕರ ಮಾಳವ್ವ ಕೋಂ ಮುದಕಪ್ಪ, ಕುರಿ ಮಲವ್ವ ಕೋಂ ಭೀಮಪ್ಪ ಮುತಾರಿ ಭೀಮವ್ವ ಕೋಂ ಯಲಪ್ಪ ಮುತಾರಿ ಶರಣಪ್ಪ ತಂದೆ ಯಲ ಮುತಾರಿ ಮಂಜುನಾಥ ತಂದೆ ಯಲ ಮುತಾರಿ ರೇಣಪ್ಪ ತಂದೆ ಯಲಪ್ಪ ಬಂಡಿಹಾಳ ಸಾವಿತ್ರಿ ಕೋಂ ಶಿವಕುಮಾರ ಮುತಾರಿ ಶರಣಪ್ಪ ತಂದೆ ಕಳಕಪ್ಪ ಮುತಾರಿ ಅದೀಕಪ್ಪ ತಂದೆ ಕಳಕಪ್ಪ ಮುತಾರಿ ಪರಸಪ್ಪ ತಂದೆ ಕಳಕಪ್ಪ ಮುತಾರಿ ಸೋಮಪ್ಪ ತಂದೆ ಕಳಕಪ್ಪ ಮುತಾರಿ ಹಣಮವ್ವ ಕೋ ಹಣಮಪ್ಪ ದಾಸರ ಯಲವ್ವ ಕೋಂ ಬಸಪ್ಪ ನಾಯ್ಕರ ಚನ್ನವ್ವ ಕೋಂ ಬಸಪ್ಪ ನಾಯ್ಕರ ಗಂಗವ್ವ ಕೋ ಕಳಕಪ್ಪ ಮುತಾರಿ ಮುತ್ತಪ್ಪ ತಂದೆ ಹಣಮಪ್ಪ ಮುತಾರಿ ಮಲ ತಂದೆ ಅಡಿವೆಪ್ಪ ಮುತಾರಿ ಈರಪ್ಪ ತಂದೆ ಕಳಕಪ್ಪ ಮುತಾರಿ ಶರಣಪ್ಪ ತಂದೆ ಬಾಳಪ್ಪ ಮುತಾರಿ ಕೋಟೆಪ್ಪ ತಂದೆ ಬಾಳಪ್ಪ ಮಲ್ಲಿಕಾರ್ಜುನ ತಂದೆ ಮಲಪ್ಪ | 1 | 2 | ಖುಷ್ಕಿ | 0–01 |
| | ಒಟ್ಟು | | | | 02–22 |

ಸಹಿ ಆಗಿದೆ/–
(ಶ್ರೀ ಅಬೀದ ಗದ್ಯಾಳ)
**ಹೆಚ್ಚುವರಿ ವಿಶೇಷ ಭೂ ಸ್ವಾಧಿನಾಧಿಕಾರಿಗಳು**
ನಂ.1, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟೆ

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**
ಸಹಿ ಆಗಿದೆ/–
**ಆಯುಕ್ತರು**
ಪುನರ್‌ವಸತಿ, ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಕೃ.ಮೇ.ಯೋ. ಬಾಗಲಕೋಟೆ

# ಯೋಗಾಸನ ಕ್ರೀಡಾ ಸ್ಪರ್ಧೆಗಳಲ್ಲಿ ಗದಗ ಜಿಲ್ಲೆಯ ಸಾಧನೆ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ(ರಿ) ಬೆಂಗಳೂರು ಇವರು ಡಾ. ಬಸವರಾಜ ನಾಗೂರ ಮೆಮೋರಿಯಲ್ ಎಜ್ಯುಕೇಶನ್ ಟ್ರಸ್ಟಿನ ಡಾ. ನಾಗೂರ ಆಯುರ್ವೇದಿಕ್ ಮೆಡಿಕಲ್ ಕಾಲೇಜು ವಿಜಯಪೂರ ಇವರ ಸಹಯೋಗದಲ್ಲಿ ಶ್ರೀ ಸಂಗನಬಸವ ಸಮುದಾಯ ಭವನ ವಿಜಯಪೂರದಲ್ಲಿ ಇತ್ತೀಚೆಗೆ ನಡೆಸಿದ ಕರ್ನಾಟಕ ರಾಜ್ಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗಳಲ್ಲಿ ಗದಗ ಜಿಲ್ಲೆಯ ಯೋಗಾಸನ ಕ್ರೀಡಾಪಟುಗಳು ಗೆಲವು ಸಾಧಿಸಿದ್ದಾರೆ.

ಸ್ಪರ್ಧೆಗಳು ಸ್ಪರ್ಧಿಗಳ ವಯೋಮಿತಿಯನ್ನಾಧರಿಸಿ ಸ್ತ್ರೀ-ಪುರುಷರಿಗೆ ಪ್ರತ್ಯೇಕವಾಗಿ ನಡೆದಿದ್ದು, ಭಾಗವಹಿಸಿದ ಸ್ಪರ್ಧೆಗಳಲ್ಲಿ ಆಕಾಶ ಜಂಗಿನ(14-16 ವರ್ಷದ ಬಾಲಕರು) 5ನೇ ಸ್ಥಾನ, ನಿರೀಕ್ಷಿತಾ ಡೊಳ್ಳಿನ (16-18 ವರ್ಷ) ದ್ವಿತೀಯ ಸ್ಥಾನ, ವಿಜಯ ಜಂಗಿನ(16-18 ವರ್ಷ) 5ನೇ ಸ್ಥಾನ, ಬಸವರಾಜ ಮೂಲಿಮನಿ(21-25 ವರ್ಷ) 4ನೇ ಸ್ಥಾನ, ಅಕ್ಷತಾ ಕೊಣ್ಣೂರ(21-25 ವರ್ಷ) ತೃತೀಯ ಸ್ಥಾನ, ಸರಸ್ವತಿ ಕೊಂಡಿಕೊಪ್ಪ (21-25 ವರ್ಷ) 5ನೇಸ್ಥಾನ, ಸಂಜನಾ ಸಜ್ಜನರ(21-25 ವರ್ಷ) 6ನೇ ಸ್ಥಾನ, ಫಕೀರಪ್ಪ ರೇವಡಿ (25-30 ವರ್ಷ) ತೃತೀಯ ಸ್ಥಾನ, ಯಶವಂತ ಮತ್ತೂರ (35-45 ವರ್ಷ) ಪ್ರಥಮ ಸ್ಥಾನ, ಬಸನಗೌಡ ಪಾಟೀಲ (35-45 ವರ್ಷ) ತೃತೀಯ ಸ್ಥಾನ ಪಡೆದಿದ್ದಾರೆ.

ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ರೆಫ್ರಿ ಪರೀಕ್ಷೆಯಲ್ಲಿ ಗದಗ ಜಿಲ್ಲೆಯ ಸಂತೋಷ ಕರಿಗೌಡ್ರ, ಗಂಗಾಧರ ಕೆಂಗಾರ, ಸ್ವರೂಪಾನಂದ ಮಳಲಿ ಮತ್ತು ಅಕ್ಷತಾ ಕೊಣ್ಣೂರ, ತೇರ್ಗಡೆಯಾಗಿದ್ದಾರೆ. ಕೆ ಎಸ್ ಪಲ್ಲೇದ, ಸುಮಂಗಲಾ ಹದ್ಲಿ, ಎಸ್ ಎಚ್ ಹಿರೇಮಠ, ಚೇತನ ಚುಂಚಾ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ಸ್ಪರ್ಧೆಗಳಲ್ಲಿ ವಿಜೇತರಾದ ಸರ್ವರಿಗೂ ಗದಗ ಜಿಲ್ಲಾ ಅಮೆಚೂರ್ ಯೋಗಾಸನ ಕ್ರೀಡಾ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ಅಧ್ಯಕ್ಷ ಕೆ ಎಸ್ ಪಲ್ಲೇದ ಅಭಿನಂದಿಸಿದ್ದಾರೆ.

# ಬಸ್‌ಗಳನ್ನು ತಡೆದು ವಿದ್ಯಾರ್ಥಿಗಳ ಆಕ್ರೋಶ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಹರದಗಟ್ಟಿ ಗ್ರಾಮದಿಂದ ಸರಿಯಾದ ಬಸ್ ಸೌಲಭ್ಯವನ್ನು ಒದಗಿಸದಿದ್ದಲ್ಲಿ ಯಾವುದೇ ಬಸ್‌ಗಳ ಸಂಚಾರಕ್ಕೆ ಬಿಡುವದಿಲ್ಲ ಎಂದು ಪಟ್ಟು ಹಿಡಿದ ವಿದ್ಯಾರ್ಥಿಗಳು ರಸ್ತೆಯಲ್ಲಿ ಬಸ್‌ಗಳನ್ನು ತಡೆದು, ಪ್ರತಿಭಟನೆ ನಡೆಸಿದ ಘಟನೆ ಹರದಗಟ್ಟಿ ಗ್ರಾಮದಲ್ಲಿ ಮಗಳವಾರ ನಡೆದಿದೆ.

ನಿತ್ಯವೂ ನೂರಾರು ಜನರು, ವಿದ್ಯಾರ್ಥಿಗಳು ವಿದ್ಯಾಭ್ಯಾಸ, ವ್ಯಾಪಾರ ವಹಿವಾಟು ಸೇರಿದಂತೆ ಹಲವಾರು ಕೆಲಸಗಳಿಗೆ ಪಟ್ಟಣಕ್ಕೆ ಹೋಗಿ ಬರುತ್ತಿದ್ದಾರೆ. ಆದರೆ ಬಸ್‌ಗಳ ಸೌಲಭ್ಯ ಸರಿಯಾಗಿಲ್ಲ. ಮುಖ್ಯವಾಗಿ ಮಕ್ಕಳಿಗೆ ಶಾಲಾ ಅವಧಿಗೆ ಬಸ್‌ಗಳು ಇಲ್ಲದೆ ಇರುವದರಿಂದ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದು, ಬಸ್ ಸೌಲಭ್ಯಗಳನ್ನು ಸರಿಪಡಿಸುವಂತೆ ವಿನಂತಿಸುತ್ತಿದ್ದರೂ ಇದುವರೆಗೂ ಸೂಕ್ತ ಪರಿಹಾರ ಸಿಕ್ಕಿಲ್ಲ. ಅದಕ್ಕಾಗಿ ವಿದ್ಯಾರ್ಥಿಗಳು ಪ್ರತಿಭಟನೆಯ ಹಾದಿಯನ್ನು ಹಿಡಿಯುವಂತಾಗಿದೆ ಎಂದು ಪಾಲಕರು ಆರೋಪಿಸಿದರು.

ನಂತರ ಪ್ರಯಾಣಿಕರು ಹಾಗೂ ಗ್ರಾಮಸ್ಥರು, ವಿದ್ಯಾರ್ಥಿಗಳು ಪ್ರತಿಭಟನೆಯಿಂದ ಹಿಂದೆ ಸರಿಯುವಂತೆ ಮನವೊಲಿಸುವಲ್ಲಿ ಸಫಲರಾದರು. ಈ ಸಂದರ್ಭದಲ್ಲಿ ಲಕ್ಷ್ಮಣ ಲಮಾಣಿ, ನಾನಪ್ಪ ಲಮಾಣಿ, ಸೋಮಪ್ಪ ಲಮಾಣಿ, ರಮೇಶ ಲಮಾಣಿ, ತಿಪ್ಪಣ್ಣ ಲಮಾಣಿ, ರಾಹುಲ್ ಲಮಾಣಿ, ಕುಮಾರ ಲಮಾಣಿ ಮತ್ತಿತರಿದ್ದರು.

# ಮುಕ್ತಿಧಾಮ ಸಂಘ ಅಸ್ತಿತ್ವಕ್ಕೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಅಗಸ್ತ್ಯತೀರ್ಥದ ಹತ್ತಿರವಿರುವ ಮುಕ್ತಿಧಾಮದ ಅಭಿವೃದ್ಧಿ ಮತ್ತು ಸೌಲಭ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಲಕ್ಷ್ಮೇಶ್ವರ ಮುಕ್ತಿಧಾಮ ಸಂಘವನ್ನು ಮತ್ತೆ ಪ್ರಾರಂಭಿಸಲಾಗಿದ್ದು, ರವಿವಾರ ಮುಖಂಡರ ಸಭೆಯಲ್ಲಿ ಸಂಘಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಂಘದ ಗೌರವಾಧ್ಯಕ್ಷರಾಗಿ ಹಿರಿಯ ಮುಖಂಡ ಮಹಾಬಳೇಶ್ವರಪ್ಪ ಬೇವಿನಮರದ ಹಾಗೂ ಅಧ್ಯಕ್ಷರಾಗಿ ವಕೀಲ ವ್ಹಿ ಎಲ್ ಪೂಜಾರ ಅವರನ್ನು ಒಮ್ಮತದಿಂದ ಆಯ್ಕೆ ಮಾಡಲಾಯಿತು. ಮಹಾಬಳೇಶ್ವರಪ್ಪ ಬೇವಿನಮರದ (ಗೌರವಾಧ್ಯಕ್ಷ), ವ್ಹಿ ಎಲ್ ಪೂಜಾರ(ಅಧ್ಯಕ್ಷ), ನಾರಾಯಣಸಾ ಪವಾರ, ವೈಭವ ಗೋಗಿ(ಉಪಾಧ್ಯಕ್ಷರು), ವೆಂಕಟೇಶ ಮಾತಾಡೆ, ಬಾಬು ವೇರ್ಣೆಕರ (ಕಾರ್ಯದರ್ಶಿಗಳು), ಗಿರೀಶ ಅಗಡಿ(ಖಜಾಂಚಿ), ಸದಸ್ಯರಾಗಿ ಮೋಹನ ಸುತಾರ, ಅಭಯ ಜೈನ್, ಮಹೇಶ ರಾಕೇಚಾ, ಈಶ್ವರ ಗದಗ, ಖಂಡೋಬಾ ಅಣ್ಣಿಗೇರಿ, ಭರಮಣ್ಣ ಸಂತೂಬಾಳ, ರವಿ ಬಿಸೆ ಹಾಗೂ ಕಾಶೀನಾಥ ಬೋಮಲೆ ಇವರನ್ನು ಆಯ್ಕೆ ಮಾಡಲಾಯಿತು.

ಮುಕ್ತಿಧಾಮದಲ್ಲಿ ಆದ್ಯತೆಗನುಸಾರವಾಗಿ ಆಗಬೇಕಾಗಿರುವ ತುರ್ತು ಕಾರ್ಯಗಳನ್ನು ಶೀಘ್ರವೇ ಪ್ರಾರಂಭಿಸುವದು ಮತ್ತು ಮುಕ್ತಿಧಾಮ ಅಭಿವೃದ್ಧಿಗೆ ಅವಶ್ಯವಾದ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರಕಾರದಿಂದ ಅನುದಾನಕ್ಕೆ ಬೇಡಿಕೆ ಸಲ್ಲಿಸುವದು, ಸಂಬಂಧಿಸಿದ ಎಲ್ಲ ಸಮಾಜ ಬಾಂಧವರು ವಂತಿಗೆ ರೂಪದಲ್ಲಿ ಅಭಿವೃದ್ಧಿಗೆ ಹಣ ಹೊಂದಿಸುವದರ ಕುರಿತು ಚರ್ಚಿಸಲಾಯಿತು.

### ಈ ತಿಂಗಳಲ್ಲಿ 1.42 ಕೋಟಿ ಕುಟುಂಬಗಳಿಗೆ ಗೃಹ ಜ್ಯೋತಿ ಯೋಜನೆಯಿಂದ ಲಾಭ-ಇಂಧನ ಸಚಿವ ಜಾರ್ಜ್

# ಆ. 5 ರಂದು ಕಲಬುರಗಿಯಲ್ಲಿ 'ಗೃಹ ಜ್ಯೋತಿ'ಗೆ ಸಿಎಂ ಚಾಲನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ಆಗಸ್ಟ್ 5ರಂದು ಕಲಬುರಗಿಯ ಎನ್‌ವಿ ಮೈದಾನದಲ್ಲಿ ಬಹುನಿರೀಕ್ಷಿತ 'ಗೃಹ ಜ್ಯೋತಿ' ಯೋಜನೆಗೆ ಚಾಲನೆ ನೀಡಲಿದ್ದಾರೆ.

ಕಾರ್ಯಕ್ರಮದ ಬಗ್ಗೆ ವಿವರ ನೀಡಲು ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಇಂಧನ ಸಚಿವ ಕೆ.ಜೆ. ಜಾರ್ಜ್,"ಕರ್ನಾಟಕ ಸರ್ಕಾರದ 5 ಪ್ರಮುಖ ಭರವಸೆಗಳ ಪೈಕಿ ಒಂದಾದ'ಗೃಹ ಜ್ಯೋತಿ' ಯೋಜನೆಗೆ ಮುಖ್ಯಮಂತ್ರಿಯವರು ಕಲಬುರಗಿಯಲ್ಲಿ ಚಾಲನೆ ನೀಡಲಿದ್ದಾರೆ. ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಐಟಿ ಬಿಟಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಿರಿಯ ಸಚಿವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು", ಎಂದರು.

"ಮಧ್ಯಮ ವರ್ಗದ ಜನರ ಜೀವನ ಸುಧಾರಣೆ ಮಾಡುವ ಮಹಾತ್ವಾಕಾಂಕ್ಷಿ ಯೋಜನೆ ಇದು. 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುವ ಯೋಜನೆ ಕೇವಲ ವಿದ್ಯುತ್ ಶುಲ್ಕದ ಕಡಿಮೆ ಮಾಡುತ್ತಿಲ್ಲ, ಬದಲಾಗಿ ಕುಟುಂಬದ ಆರ್ಥಿಕ ಪ್ರಗತಿಯ ಮೂಲಕ ಸಾಮಾಜಿಕ ಭದ್ರತೆ ನೀಡಲಿದೆ,"ಎಂದು ಜಾರ್ಜ್ ವಿವರಿಸಿದರು.

"'ಗೃಹ ಜ್ಯೋತಿ' ಯೋಜನೆಯ ಅನುಷ್ಠಾನದ ಮೊದಲ ತಿಂಗಳಿನಲ್ಲೇ ಸುಮಾರು 1.42 ಕೋಟಿ ಕುಟುಂಬಗಳು ಇದರ ಪ್ರಯೋಜನ ಪಡೆಯಲಿವೆ. ಜುಲೈ 27ರ ಮೊದಲು ಅರ್ಜಿ ಸಲ್ಲಿಸಿದವರು ಮಾತ್ರ ಜುಲೈ ತಿಂಗಳ ವಿದ್ಯುತ್ ಬಳಕೆಯ ಶುಲ್ಕದಲ್ಲಿ ಲಾಭ ಪಡೆಯಲು ಅರ್ಹರಾಗಿರುತ್ತಾರೆ. ಜುಲೈ 27ರ ನಂತರ ಅರ್ಜಿ ಸಲ್ಲಿಸಿದವರು ಆಗಸ್ಟ್‌ನಲ್ಲಿ ಅವರ ಬಳಕೆಯ ಆಧಾರದ ಮೇಲೆ ಸೆಪ್ಟೆಂಬರ್‌ನ ಬಿಲ್ಲಿಂಗ್‌ನಲ್ಲಿ ಪ್ರಯೋಜನ ಪಡೆಯುತ್ತಾರೆ,"ಎಂದರು.

"ಯೋಜನೆಗೆ ನೋಂದಾಯಿಸಿಕೊಳ್ಳಲು ಯಾವುದೇ ಅಂತಿಮ ದಿನಾಂಕ ಘೋಷಿಸಿಲ್ಲ. ಯಾವುದೇ ಸಮಯದಲ್ಲಿ ನೋಂದಾಯಿಸಿಕೊಂಡರೂ ಅದರ ನಂತರದ ತಿಂಗಳಿನಿಂದ ಪ್ರಯೋಜನ ಪಡೆಯಬಹುದು. 1.42 ಕೋಟಿ ಅರ್ಜಿದಾರರ ಪೈಕಿ ಸುಮಾರು 18 ಲಕ್ಷ ಮಂದಿ 'ಭಾಗ್ಯ ಜ್ಯೋತಿ', 'ಕುಟೀರ ಜ್ಯೋತಿ' ಮತ್ತು 'ಅಮೃತ್ ಜ್ಯೋತಿ'ಯಂತಹ ಹಾಲಿ ಯೋಜನೆಗಳ ಫಲಾನುಭವಿಗಳು,"ಎಂದು ಅವರು ತಿಳಿಸಿದರು.

"2.14 ಕೋಟಿ ಗೃಹಬಳಕೆದಾರರ ಮಾಸಿಕ ವಿದ್ಯುತ್ ಬಳಕೆಯ ಅಂದಾಜು ನಿರ್ಧರಿಸಲು ಈಗಾಗಲೇ ಒಂದು ವರ್ಷದ ವಿದ್ಯುತ್ ಬಳಕೆಯ ಸರಾಸರಿ ಲೆಕ್ಕಾಚಾರ ಮಾಡಲಾಗಿದೆ. 2022- 2023 ಹಣಕಾಸು ವರ್ಷದ ಸರಾಸರಿ ಬಳಕೆಯನ್ನು ಪರಿಗಣಿಸಿ, ಪ್ರತಿ ಗ್ರಾಹಕರ ಸರಾಸರಿ ಬಳಕೆಯ ಮೇಲೆ ಹೆಚ್ಚುವರಿ 10 ಪ್ರತಿಶತವನ್ನು ನೀಡುವ ಮೂಲಕ ಮಾಸಿಕ ವಿದ್ಯುತ್ ಬಳಕೆಯ ಅಂದಾಜು ನಿರ್ಧರಿಸಲಾಗುತ್ತದೆ. ಆದಾಗ್ಯೂ, ಗರಿಷ್ಠ ಉಚಿತ ವಿದ್ಯುತ್ ಬಳಕೆಯ ಮಿತಿಯನ್ನು 200 ಯುನಿಟ್‌ಗಳಿಗೆ ನಿರ್ಬಂಧಿಸಲಾಗಿದೆ," ಎಂದರು.

"ಸರಾಸರಿ ಬಳಸುವ ಯೂನಿಟ್ ವಿದ್ಯುತ್ 200 ಯೂನಿಟ್‌ಗಳಿಗಿಂತ ಕಡಿಮೆಯಿದ್ದರೆ, ಮನೆಯ ಗ್ರಾಹಕರು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ಸರಾಸರಿಗಿಂತ ಹೆಚ್ಚಿನ ಯೂನಿಟ್ ಬಳಸಿದರೆ, ಹೆಚ್ಚುವರಿ ಯೂನಿಟ್‌ಗೆ ಮಾತ್ರ ಶುಲ್ಕ ಪಾವತಿಸಬೇಕಾಗುತ್ತದೆ. ಆದರೆ,200ಕ್ಕೂ ಹೆಚ್ಚು ಯೂನಿಟ್ ಬಳಸಿದರೆ ಪೂರ್ಣ ಶುಲ್ಕ ಪಾವತಿಸಬೇಕಾಗುತ್ತದೆ," ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಇಂಧನ, ಮೂಲಸೌಕರ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಪಂಂಕಜ್ ಕುಮಾರ್ ಪಾಂಡೆ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.




### ಸೊಸೈಟಿ ಜಮೀನು ಸಾಗುವಳಿದಾರ ರೈತರ ಮಾಲೀಕತ್ವಕ್ಕೆ-ಸಚಿವ ಸಂತೋಷ ಲಾಡ್

# ಜನವಸತಿಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಹಲವಾರು ದಶಕಗಳಿಂದ ಅರಣ್ಯದಲ್ಲಿದ್ದುಕೊಂಡು ಜೀವನ ಸಾಗಿಸುತ್ತಿರುವ ಧಾರವಾಡ ಹಾಗೂ ಅಳ್ನಾವರ ತಾಲೂಕಿನ ಕೆಲ ಜನವಸತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಲ್ಲದೆ ಆ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ತ್ವರಿತಗತಿಯಲ್ಲಿ ಪ್ರಸ್ತಾವನೆಗಳನ್ನು ಜಿಲ್ಲಾಡಳಿತಕ್ಕೆ ಸಲ್ಲಿಸುವಂತೆ ಕಾರ್ಮಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಮಂಗಳವಾರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಉಪ ವಿಭಾಗ ಅಧಿಕಾರಿಗಳ ಕಚೇರಿಯಲ್ಲಿ ಇಂದು ಗೌಳಿ ಸಮಾಜದ ಸಮಸ್ಯೆಗಳನ್ನು ಬಗೆಹರಿಸಲು ಫಾರ್ಮಿಂಗ್ ಸೊಸೈಟಿ ಜಮೀನು ಸಾಗುವಳಿದಾರರ ಕುರಿತಾಗಿ ಜರುಗಿದ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಚಿವರು. ಶಿವನಗರ, ರೇಣುಕಾನಗರ, ಟಿ.ಆರ್ ನಗರ, ಲಿಂಗನಕೊಪ್ಪ, ಕೊಕ್ಕರೆವಾಡ, ಉಡವನಾಗಲಾವಿ, ಹುಣಸಿ ಕುಮರಿ, ಜನವಸತಿ ಪ್ರದೇಶಗಳನ್ನು ಶೀಘ್ರವೇ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಎಲ್ಲ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ ಸೂಚಿಸಿದರು.

ಅಳ್ನಾವರ ಮಾರ್ಗದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಶಿವನಗರ ಗೌಳಿ ವಾರ್ಡ್ ದಲ್ಲಿ ಕಳೆದ ನಾಲ್ಕು ದಶಕಗಳಿಂದ ಗೌಳಿಗರು ವಾಸಿಸುತ್ತಿದ್ದು, ಅವರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವುದು ಸರಕಾರದ ಜವಾಬ್ದಾರಿಯಾಗಿದೆ.

ಶಿವನಗರ ಗೌಳಿವಾಡ ಕಂದಾಯ ಗ್ರಾಮ ಘೋಷಣೆಗೆ ಅರ್ಹವಾಗಿದ್ದು. ಗ್ರಾಮ ಸಭೆ ಹಾಗೂ ಗ್ರಾಮ ಅರಣ್ಯ ಹಕ್ಕು ಸಮಿತಿ ಸಭೆಗಳಲ್ಲಿ ಠರಾವು ಆದಂತೆ ತಕ್ಷಣವೇ ಉಪ ವಿಭಾಗ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವ ಕುರಿತು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು.

ಜನವಸತಿ ಪ್ರದೇಶವನ್ನು ಮಾತ್ರ ಕಂದಾಯ ಭೂಮಿಯನ್ನಾಗಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಸಮ್ಮತಿಸಿದರು. ಮಳೆಗಾಲದಲ್ಲಿ ವಿದ್ಯುತ್ ಸಂಪರ್ಕ ತೊಂದರೆ-ಯಾಗಿದ್ದು ತಕ್ಷಣವೆ ಸೋಲಾರ್ ಬೀದಿ ದೀಪ ಅಳವಡಿಸುವಂತೆ ಪಿ.ಡಿ.ಓ ಗೆ ಸೂಚಿಸಲಾಯಿತು.

ಇತೀಚೆಗೆ ಮಳೆಯಿಂದಾಗಿ ಶಾಲಾ ಗೋಡೆ ಕುಸಿದಿದ್ದು ಸದ್ಯ ಸ್ಥಳೀಯರೊಬ್ಬರ ಕಟ್ಟಡದಲ್ಲಿ ಮಕ್ಕಳ ಕಲಿಕೆ ಮುಂದುವರೆದಿದೆ. ಶೀಘ್ರದಲ್ಲೇ ಶಾಲಾ ಕಟ್ಟಡ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದೆಂದು ಬಿ.ಇ.ಓ ಸಭೆಗೆ ತಿಳಿಸಿದರು.

ರೇಣುಕಾನಗರದಲ್ಲಿ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು. ನೀರಿನ ಟ್ಯಾಂಕ್‌ನ್ನು ಹಾಗೂ ಜಲಜೀವನ ಮಿಷನ್ ಮುಗಿಸಿ ನೀರು ಸರಬರಾಜಿಗೆ ತೊಂದರೆಯಾಗದಂತೆ ಸೂಚಿಸಿದರು. ಲಿಂಗನಕೊಪ್ಪ, ಮಡಿಕೆಕೊಪ್ಪ, ಕಿವುಡೇಬೆಲ್ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿಸಲು ಈಗಾಗಲೇ ಕ್ರಮ ಕೈಗೊಳ್ಳುತಿರುವುದಾಗಿ ಸಭೆಗೆ ತಿಳಿಸಲಾಯಿತು.

ಅಂಬೋಲಿ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಸಮಸ್ಯೆ ನಿವಾರಣೆಗೆ ತಕ್ಷಣವೇ 13 ವಿದ್ಯುತ್ ಕಂಬಗಳನ್ನು ಅಳವಡಿಸುವಂತೆ ಸಚಿವರು ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರಿಗೆ ಸಭೆಯಲ್ಲಿ ದೂರವಾಣಿ ಮುಖಾಂತರ ಸೂಚಿಸಿದರು.

ಟಿ. ರಾಮಚಂದ್ರ ನಗರದಲ್ಲಿ ಬಸ್ ನಿಲುಗಡೆ ಹಾಗೂ ಶಾಲಾ ದುರಸ್ತಿ ಕಾರ್ಯವನ್ನು ಒಂದು ವಾರದಲ್ಲಿ ಬಗೆಹರಿಸುವಂತೆ ಸಚಿವರು ಸೂಚಿಸಿದರು.

ಉಡವನಾಗಲಾವಿ ಹಾಗೂ ಹುಣಸಿ ಕುಮರಿ ಜನವಸತಿಗಳನ್ನು ಕಂದಾಯ ಗ್ರಾಮ ಪರಿವರ್ತನೆಗೆ ತಕ್ಷಣವೇ ಪ್ರಸ್ತಾವನೆಗಳನ್ನು ಪೂರ್ಣಗೊಳಿಸುವಂತೆ ಸಚಿವರು ಉಪವಿಭಾಗಾಧಿಕಾರಿ ಅಶೋಕ ತೇಲಿ ಅವರಿಗೆ ತಿಳಿಸಿದರು.

ಫಾರ್ಮಿಂಗ್ ಸೊಸೈಟಿ ಜಮೀನು ಸಾಗುವಳಿದಾರ ರೈತರ ಮಾಲೀಕತ್ವಕ್ಕೆ;

ಕಲಘಟಗಿ, ಅಳ್ನಾವರ, ಧಾರವಾಡ ತಾಲೂಕಿನಲ್ಲಿ ಸರಕಾರಿ ಭೂಮಿಯನ್ನು ಗುತ್ತಿಗೆಗೆ ಪಡೆದು ರೈತರಿಗೆ ಉಳುಮೆ ಮಾಡಲು ಫಾರ್ಮಿಂಗ್ ಸೊಸೈಟಿಗಳನ್ನು ನೀಡಿದ್ದು, ಜಮೀನನ್ನು ನಿಯಮಾನುಸಾರ ಸದ್ಯ ಸಾಗುವಳಿ ಮಾಡುತ್ತಿರುವ ರೈತರ ಹೆಸರಿಗೆ ಖಾತಾ ಮಾಡುವಂತೆ ಸಚಿವರು ಈ ಹಿಂದಿನ ಸಭೆಯಲ್ಲಿ ಉಪವಿಭಾಗಾಧಿಕಾರಿಗಳಾದ ಅಶೋಕ ತೇಲಿ ಇವರಿಗೆ ಸೂಚಿಸಿದ್ದರು. ಸದ್ಯ ಪಾಮಿರ್ಂಗ್ ಸೊಸೈಟಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದು, ಸಾಗುವಳಿ ಮಾಡುತ್ತಿರುವ ರೈತರಿಗೆ ಜಮೀನು ಮಾಲಿಕತ್ವ ನೀಡುವ ಪ್ರಕ್ರಿಯೆ ಆರಂಭಿಸಲಾಗುವುದೆಂದರು.

ಸೊಸೈಟಿ ಆಕ್ಟ್ ನಲ್ಲಿ ರೈತರಿಗೆ ನಮೂನೆ 57ರಲ್ಲಿ ಅರ್ಜಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ, ಅವುಗಳನ್ನೆಲ್ಲ ಪರಿಶೀಲಿಸಿ ಕ್ರಮ ಕೈಗೊಳ್ಳುವಲಾಗುವುದೆಂದರು

ಸಭೆಯಲ್ಲಿ ಡಿ.ಎಫ್.ಓ ಸೋನಲ್ ವೃಷ್ಣಿ, ಎಎಸಿಎಫ್ ಪರಿಮಳ ಹುಲ್ಲಣ್ಣವರ, ಧಾರವಾಡ ತಹಸೀಲ್ದಾರ ದೊಡ್ಡಪ್ಪ ಹೂಗಾರ್, ಕಲಘಟಗಿ ತಾಲೂಕು ಪಂಚಾಯಿತಿ ಇ.ಓ ಪರಶುರಾಮ್ ಸಾವಂತ್. ಅಳ್ನಾವರ ಇ.ಓ ಸಂತೋಷ ಕುಮಾರ್ ತಳಕಲ್, ಅಳ್ನಾವರ ತಹಸೀಲ್ದಾರ ಬಸವರಾಜ್ ಬೆಣ್ಣೆಶಿರೂರ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ಆಗಸ್ಟ್ 31ರಿಂದ ವಿಮಾನ ಕಾರ್ಯಾಚರಣೆ ಮರು ನಿಗದಿ

■ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ

ಆಗಸ್ಟ್ 11ರಂದು ವಿಮಾನ ಕಾರ್ಯಾಚರಣೆ ಪ್ರಾರಂಭವಾಗಬೇಕಿತ್ತು. ವಿಮಾನ ನಿಲ್ದಾಣವು ಬಾಂಬ್ ಬೆದರಿಕೆ ಆಕಸ್ಮಿಕ ಯೋಜನೆಗೆ (ಬಿಟಿಸಿಪಿ) ಎನ್‌ಓಸಿ ಪಡೆದಿದೆ. ಆದರೆ, ಇದನ್ನು ಜುಲೈ 18ರಂದು ಡಿಜಿಸಿಎ ಹಿಂತೆಗೆದುಕೊಂಡಿತು. ಈಗ, ಆಗಸ್ಟ್ 31ರಿಂದ ವಿಮಾನ ಕಾರ್ಯಾಚರಣೆಯನ್ನು ಮರು ನಿಗದಿಪಡಿಸಲಾಗಿದೆ ಎಂದು ಲೋಕಸಭಾ ಸದಸ್ಯ ಬಿ ವೈ ರಾಘವೇಂದ್ರ ತಿಳಿಸಿದರು.

ಈ ಹಿಂದೆ ಹತ್ತಿರದ ವಿಮಾನ ನಿಲ್ದಾಣವಾದ ಹುಬ್ಬಳ್ಳಿ-ಧಾರವಾಡದ ಸಹಕಾರವನ್ನು ಪರಿಗಣಿಸಿ ಬಿಟಿಸಿಪಿಯನ್ನು ರೂಪಿಸಲಾಗಿತ್ತು. ಇತ್ತೀಚಿನ ಪರಿಷ್ಕೃತ ನೀತಿಯು ಈಗ ವಿಮಾನ ನಿಲ್ದಾಣಗಳಿಗೆ ಎಲ್ಲಾ ತಾಂತ್ರಿಕ ಬೆಂಬಲವನ್ನು ಹೊಂದುವುದನ್ನು ಕಡ್ಡಾಯಗೊಳಿಸಿದೆ.

### ಆಗಸ್ಟ್ 5, 6ರಂದು ಪ್ರಸೂತಿಶಾಸ್ತ್ರ, ಸ್ತ್ರೀರೋಗ ತಜ್ಞರ ಕಸೋಗಾ ಸಮ್ಮೇಳನ

# 3ನೇ ರಾಜ್ಯಮಟ್ಟದ ಸಮ್ಮೇಳನವನ್ನು ಯಶಸ್ವಿಗೊಳಿಸಿ



ಎರಡು ದಿನ ನಡೆಯಲಿರುವ ಈ ವೈದ್ಯಕೀಯ ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ, ಜಿಮ್ಸ್ ನಿರ್ದೇಶಕ ಬಸವರಾಜ ಬೊಮ್ಮನಹಳ್ಳಿ, ಜಿಮ್ಸ್ ಪ್ರಾಚಾರ್ಯ ಜಿ ಎಂ ರಾಜು, ನಾಡಿನ ಖ್ಯಾತ ವೈದ್ಯರು ಅತಿಥಿಗಳಾಗಿ ಪಾಲ್ಗೊಳ್ಳುವರು. ಸಮ್ಮೇಳನದ ಯಶಸ್ಸಿಗಾಗಿ ವಿವಿಧ ಸಮಿತಿ, ಉಪಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆ. ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಪಾಲ್ಗೊಳ್ಳಲಿಚ್ಛಿಸುವ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳಬಹುದು.

**- ಡಾ.ಶಶಿಧರ ರೇಶ್ಮೆ.**
ಹಿರಿಯ ವೈದ್ಯರು, ಗದಗ.

ಕರ್ನಾಟಕ ರಾಜ್ಯ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞರ ಸಂಘದ 3ನೇ ರಾಜ್ಯಮಟ್ಟದ ಸಮ್ಮೇಳನ ಗದುಗಿನಲ್ಲಿ ಯಶಸ್ವಿಗೊಳಿಸಲು ಗಾಗ್ಸ್ (Gadag Obstetrics & Gynecological Society) ಮತ್ತು ಜಿಮ್ಸ್ ಮುಂದಾಗಿದೆ. ವೃತ್ತಿ ನಿರತ ಯುವ ವೈದ್ಯರಿಗೆ ಸಮ್ಮೇಳನ ಉತ್ತಮ ವೇದಿಕೆಯಾಗಿದ್ದು, 40 ವರ್ಷದೊಳಗಿನ ಶೇ.50 ವೈದ್ಯರಿಗೆ ಅವಕಾಶ ಕಲ್ಪಿಸಲಾಗಿದೆ. ರಾಜ್ಯದಿಂದ ಸುಮಾರು 500ಕ್ಕೂ ಹೆಚ್ಚಿನ ವೈದ್ಯರು ಸಮ್ಮೇಳನದಲ್ಲಿ ಪಾಲ್ಗೊಳ್ಳುವರು.

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸೊಸೈಟಿ ಹಾಗೂ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಗಸ್ಟ 5 ಹಾಗೂ 6ರಂದು ಗದುಗಿನ ಜಿಮ್ಸ್ ಸಭಾಂಗಣದಲ್ಲಿ 3ನೇ ರಾಜ್ಯಮಟ್ಟದ ಯುವ ವೈದ್ಯರ ಕಸೋಗಾ (Karnatak State Obstetrics & Gynaecology Association) ಸಮ್ಮೇಳನ ಏರ್ಪಡಿಸಿದೆ ಎಂದು ಸಮ್ಮೇಳನದ ಸಂಘಟನೆಯ ಚೇರಮನ್, ಹಿರಿಯ ವೈದ್ಯ ಡಾ.ಶಶಿಧರ ರೇಶ್ಮೆ ತಿಳಿಸಿದರು.

ಅವರು ಸೋಮವಾರ ಗದಗ ಐಎಂಎ ಸಭಾಂಗಣದಲ್ಲಿ ಕಸೋಗಾ ಸಮ್ಮೇಳನದ ಯಶಸ್ಸಿಗೆ ರಚಿಸಲಾದ ವಿವಿಧ ಸಮಿತಿಗಳ ಸಭೆಯಲ್ಲಿ ಮಾತನಾಡಿದರು.

ಗದಗ ಜಿಮ್ಸ್‌ನ ಪಂ. ಭೀಮಸೇನ ಜೋಷಿ ಹಾಗೂ ಪಂ.ಪುಟ್ಟರಾಜ ಗವಾಯಿ ಸಭಾಂಗಣದಲ್ಲಿ ನಡೆಯಲಿರುವ ಈ ವೈದ್ಯಕೀಯ ಸಮ್ಮೇಳನದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತ ತಜ್ಞ ವೈದ್ಯರಿಂದ ಪ್ರಬಂಧ ಮಂಡನೆ, ಉಪನ್ಯಾಸ, ಚರ್ಚೆಗಳ ನಡೆಯಲಿವೆ. 1986ರಲ್ಲಿ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞರ ಸಂಘ ಸ್ಥಾಪನೆಗೊಂಡಿದ್ದು, ಗದಗ ಜಿಲ್ಲೆಯಲ್ಲಿ 2001ರಲ್ಲಿ ಆರಂಭಗೊಂಡಿತು. ಅಂದಿನಿಂದ ನಿರಂತರ ವೈದ್ಯಕೀಯ ಶಿಕ್ಷಣ, ವೈದ್ಯಕೀಯ ತಪಾಸಣೆ, ಉಪನ್ಯಾಸ, ಚರ್ಚೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗಿದೆ ಎಂದು ತಿಳಿಸಿದರು.

ಜಿಮ್ಸ್‌ನ ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ.ಜಯಶ್ರೀ ಎ ಕೆ, ಪ್ರಸೂತಿಶಾಸ್ತ್ರ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸೊಸೈಟಿಯ ಅಧ್ಯಕ್ಷೆ ಡಾ.ಶೃತಿ ಭಾವಿ ಪಾಟೀಲ, ಸಮಿತಿಗಳ ಪದಾಧಿಕಾರಿಗಳಾದ ಡಾ.ಉದಯ ಕುಲಕರ್ಣಿ, ಡಾ.ರಾಧಿಕಾ ಕುಲಕರ್ಣಿ, ಡಾ.ಅನುಪಮಾ ಪಾಟೀಲ, ಡಾ.ಸುನೀತಾ ಕುರಡಗಿ, ಡಾ.ಅನ್ನಪೂರ್ಣ ಧನ್ನೂರ, ಡಾ.ಸಂತೋಷ ಹುಯಿಲಗೋಳ, ಡಾ.ಪ್ರವೀಣ ಸಜ್ಜನರ, ಡಾ.ಪ್ರಭಾ ದೇಸಾಯಿ, ಡಾ.ಹನಮಂತ ನಿಪನಾಳ ಸೇರಿದಂತೆ ವೈದ್ಯಕೀಯ ವಿದ್ಯಾರ್ಥಿಗಳು ಸಮ್ಮೇಳನದ ಯಶಸ್ಸಿಗೆ ಮುಂದಾಗಿದ್ದಾರೆ ಎಂದು ಡಾ.ರೇಶ್ಮೆ ವಿವರಿಸಿದರು.

ಡಾ.ಪ್ರಕಾಶ ಕಲ್ಲೋಳಗಿ, ಡಾ.ಜಗದೀಶ ಭೂಮರಡ್ಡಿ, ಡಾ.ಪ್ಯಾರಅಲಿ ನೂರಾನಿ, ಡಾ.ರಾಜೇಶ್ವರಿ ಕುರಡಗಿ, ಡಾ.ಅಂಜಲಿ ಭೂಮರಡ್ಡಿ, ಡಾ.ರೂಪಾ ಹುಯಿಲಗೋಳ, ಡಾ.ಸಪ್ನಾ ಕಾಳೆ, ಡಾ.ಪ್ರಜೆಕ್ತಾ ಆಲೂರ, ಡಾ.ಸಾಧಿಕಾ ನೂರಾನಿ, ಡಾ.ಸ್ನೇಹಾ ಶಿರೋಳ, ಡಾ.ಸವಿತಾ ಹೊಂಬಾಳಿ, ಡಾ.ಶಿಲ್ಪಾ ದಢೂತಿ ಮುಂತಾದವರು ಸಮ್ಮೇಳನದ ಕುರಿತು ಸಲಹೆ-ಸೂಚನೆ ನೀಡಿದರು.

# ಶಿಕ್ಷಣಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಬೇಕಿದೆ: ಡಾ. ಚಂದ್ರು ಲಮಾಣಿ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶೈಕ್ಷಣಿಕವಾಗಿ ಎಲ್ಲ ಮಕ್ಕಳೂ ಸಾಧನೆ ಮಾಡಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೂ ಕಲಿಕೆಗೆ ಸೂಕ್ತ ಅವಕಾಶ ಒದಗಿಸಿಕೊಡುವದು ಅವಶ್ಯವಾಗಿದೆ. ಅನೇಕ ಸಮಸ್ಯೆಗಳಿಂದ ಸಾಕಷ್ಟು ಮಕ್ಕಳು ಕಲಿಕೆಯಿಂದ ವಂಚಿತರಾಗಿರುತ್ತಾರೆ. ಅಂಥವರನ್ನು ಗುರುತಿಸಿ, ಶಿಕ್ಷಣಕ್ಕೆ ಅವಶ್ಯವಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಅಭಿಪ್ರಾಯಪಟ್ಟರು.

ಡಾ.ಚಂದ್ರು ಲಮಾಣಿ ಅಭಿಮಾನಿಗಳ ಸಂಘದ ವತಿಯಿಂದ ಶಾಸಕರ ಜನ್ಮದಿನದ ಪ್ರಯುಕ್ತ ತಾಲೂಕಿನ ಸರಕಾರಿ ಹೈಸ್ಕೂಲ್‌ನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್‌ಗಳನ್ನು ವಿತರಿಸಿ ಮಾತನಾಡಿದರು.

ಬೆಲೆ ಏರಿಕೆ ಒತ್ತಡದ ನಡುವೆ ಮಕ್ಕಳ ವಿದ್ಯಾಭ್ಯಾಸವನ್ನು ಪೂರೈಸುವದು ತಂದೆ-ತಾಯಿಯರಿಗೆ ಸವಾಲಾಗಿದೆ. ಸರಕಾರಿ ಶಾಲೆಗಳಿಗೆ ಅವಶ್ಯವಾಗಿರುವ ಅನೇಕ ಮೂಲಭೂತ ಸೌಲಭ್ಯಗಳನ್ನು ಈಡೇರಿಸುವ ಮೂಲಕ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಭರವಸೆ ನೀಡಿದ ಅವರು, ಕ್ಷೇತ್ರದಿಂದ ಆಯ್ಕೆ ಮಾಡಿದ ಜನರ ಋಣವನ್ನು ಎಂದಿಗೂ ತೀರಿಸಲಾಗದು. ಜನರ ನೋವಿಗೆ ಸ್ಪಂದಿಸುವುದರ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಸದಾ ಪ್ರಾಮಾಣಿಕವಾಗಿ ಕೆಲಸ ಮಾಡುವದಾಗಿ ಹೇಳಿದರು.

ಯುವ ಮುಖಂಡ ವಿಜಯಕುಮಾರ ಹತ್ತಿಕಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸುನೀಲ ಮಹಾಂತಶೆಟ್ಟರ, ಎಂ ಆರ್ ಪಾಟೀಲ, ನವೀನ ಬೆಳ್ಳಟ್ಟಿ, ನಿಂಗಪ್ಪ ಬನ್ನಿ, ಶಂಕ್ರಪ್ಪ ಗೊರವರ, ದುಂಡೇಶ ಕೊಟಗಿ, ಗಂಗಾಧರ ಮೆಣಸಿನಕಾಯಿ, ರಮೇಶ ಹಾಳದೋಟದ, ಶಂಕರ ಗೋಡಿ, ರಮೇಶ ದನದಮನಿ, ಗಿರೀಶ ಚೌರಡ್ಡಿ, ಬಸವರಾಜ ಚಕ್ರಸಾಲಿ, ವಿಜಯ ಬೂದಿಹಾಳ, ವಿಶಾಲ ಬಟಗುರ್ಕಿ, ಮುಖ್ಯೋಪಾಧ್ಯಾಯ ಎಂ ಬಿ ಹೊಸಮನಿ, ಶಿಕ್ಷಕರು, ಹಿರಿಯ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka